Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
(ವಿಶೇಷ ಸಂಚಿಕೆ)

भाग IX   अनुभाग 1
PART IX   SECTION 1
ಭಾಗ IX   ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ.

सं–1  नई दिल्ली सोमवार, जनवरी 20, 1992  पुष्य 30, 1913 (शक)  खण्ड–13
ಸಂಚಿಕೆ ೧  ನವದೆಹಲಿ ಸೋಮವಾರ, ಜನವರಿ ೨೦, ೧೯೯೨  ಪುಷ್ಯ ೩೦, ೧೯೧೩ (ಶಕ)  ಸಂಪುಟ ೧೩
No. 1 New Delhi Monday, January 20, 1992  Pushya 30, 1913 (Saka)  Vol. 13

**Ministry of Law, Justice & Company Affairs**

(Legislative Department)

New Delhi, August 26, 1991.

The translations in Kannada of the following Acts, namely– (1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ ಅಧಿನಿಯಮ, ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) ತೂಕ ಮತ್ತು ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) ಜನನ, ಮರಣ ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ (೧೯೭೩ರ ೫೦)ರ ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs

(Legislative Department)

New Delhi, November 26, 1991.

The Translations in Kannada of the following namely-(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹಕ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) [illegible] ಬಡ್ಡಿ ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) [illegible] ಅಸಭ್ಯ ರೂಪಣಾ (ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯ ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ [illegible] ಕಛೇರಿ ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ [illegible] ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs

(Legislative Department)

New Delhi, December 16, 1991.

The Traslations in Kannada of the following Acts namely (1) The Copy Right Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಕೃತಿಸ್ವಾಮ್ಯ ಅಧಿನಿಯಮ, 1957 (2) ಬಾಲವಿವಾಹ ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) [illegible] ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ ಮತ್ತು [illegible] 1956 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ [illegible] ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ [illegible] ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸ[illegible]

# ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981

(1981 ರ ಸಂಖ್ಯೆ 14)

[ 29ನೇ ಮಾರ್ಚ್ 1981 ]

ವಾಯು ಮಾಲಿನ್ಯ ನಿವಾರಣೆ, ನಿಯಂತ್ರಣ ಮತ್ತು ಉಪಶಮನಕ್ಕಾಗಿ, ಹಿಂದೆ ಹೇಳಿದ ಉದ್ದೇಶಗಳನ್ನು ಈಡೇರಿಸುವ ದೃಷ್ಟಿಯಿಂದ ಮಂಡಲಿಗಳನ್ನು ಸ್ಥಾಪಿಸುವುದಕ್ಕಾಗಿ, ಅಂಥ ಮಂಡಲಿಗಳಿಗೆ ಅದಕ್ಕೆ ಸಂಬಂಧಿಸಿದ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಪ್ರದಾನ ಮಾಡುವುದಕ್ಕಾಗಿ ಮತ್ತು ವಹಿಸಿಕೊಡುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತವು ಭಾಗವಹಿಸಿದಂಥ ಜೂನ್ 1972ರಲ್ಲಿ ಸ್ಟಾಕ್ ಹೋಮ್‌ನಲ್ಲಿ ನಡೆದ ಮಾನವ ಪರಿಸರದ ಮೇಲಣ ಸಂಯುಕ್ತ ರಾಷ್ಟ್ರಗಳ ಸಮ್ಮೇಳನದಲ್ಲಿ, ಇತರ ವಿಷಯಗಳೊಡನೆ ವಾಯುವಿನ ಗುಣ ಮಟ್ಟ ಪರಿರಕ್ಷಣೆ ಮತ್ತು ವಾಯು ಮಾಲಿನ್ಯ ನಿಯಂತ್ರಣವೂ ಸೇರಿದಂತೆ ಭೂಮಿಯ ನೈಸರ್ಗಿಕ ಸಂಪನ್ಮೂಲಗಳ ಪರಿರಕ್ಷಣೆಗಾಗಿ ಯುಕ್ತ ಕ್ರಮಗಳನ್ನು ಕೈಗೊಳ್ಳಲು ತೀರ್ಮಾನವನ್ನು ಕೈಕೊಂಡಿರುವುದರಿಂದ;

ಮತ್ತು ವಾಯುವಿನ ಗುಣಮಟ್ಟ ಪರಿರಕ್ಷಣೆ ಮತ್ತು ವಾಯುಮಾಲಿನ್ಯದ ನಿಯಂತ್ರಣಕ್ಕೆ ಅವುಗಳು ಸಂಬಂಧಪಡು-ವಷ್ಟರ ಮಟ್ಟಿಗೆ ಹಿಂದೆ ಹೇಳಿದ ತೀರ್ಮಾನಗಳನ್ನು ಕಾರ್ಯಗತಗೊಳಿಸುವುದು ಅವಶ್ಯವೆಂದು ಪರ್ಯಾಲೋಚಿಸಿರುವುದರಿಂದ;

ಇದು ಭಾರತ ಗಣರಾಜ್ಯದ ಮೂವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:**—(1) ಈ ಅಧಿನಿಯಮವನ್ನು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು:**—ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಕ) "**ವಾಯು ಮಾಲಿನ್ಯಕಾರಿ ವಸ್ತು**" ಎಂದರೆ, ಮನುಷ್ಯರು ಅಥವಾ ಇತರ ಜೀವಜಂತುಗಳು ಅಥವಾ ಸಸ್ಯಗಳು ಅಥವಾ ಸ್ವತ್ತು ಅಥವಾ ಪರಿಸರಕ್ಕೆ ಹಾನಿಕಾರಕವಾಗುವ ಅಥವಾ ಹಾನಿಕಾರಕವಾಗುವ ಸಂಭವವಿರುವಂಥ ಸಾಂದ್ರತೆ-ಯಲ್ಲಿ ವಾತಾವರಣದಲ್ಲಿರುವ ಯಾವುದೇ ಘನ, ದ್ರವ ಅಥವಾ ಅನಿಲ ರೂಪದ ವಸ್ತು;

(ಖ) "**ವಾಯು ಮಾಲಿನ್ಯ**" ಎಂದರೆ ಯಾವುದೇ ವಾಯು ಮಾಲಿನ್ಯಕಾರಿ ವಸ್ತು ವಾತಾವರಣದಲ್ಲಿರುವುದು;

(ಗ) "ಅನುಮೋದಿತ ಉಪಕರಣ" ಎಂದರೆ ಯಾವುದೇ ದಹ್ಯ ವಸ್ತುವನ್ನು ಸುಡುವುದಕ್ಕಾಗಿ ಅಥವಾ ಯಾವುದೇ ಹೊಗೆ, ಅನಿಲ ಅಥವಾ ಕಣ ಪದಾರ್ಥವನ್ನು ಉತ್ಪಾದಿಸುವುದಕ್ಕಾಗಿ ಅಥವಾ ನಾಶಪಡಿಸುವುದಕ್ಕಾಗಿ ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಮಂಡಲಿಯು ಅನುಮೋದಿಸಿದ ಯಾವುದೇ ಸಾಧನ ಸಾಮಗ್ರಿ ಅಥವಾ ಸಲಕರಣೆ;

(ಘ) "ಅನುಮೋದಿತ ಇಂಧನ" ಎಂದರೆ ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಮಂಡಲಿಯು ಅನುಮೋದಿಸಿದ ಯಾವುದೇ ಇಂಧನ;

(ಙ) "ಮೋಟಾರು ವಾಹನ" ಎಂದರೆ ಆಂತರಿಕ ದಹ್ಯ ಇಂಜಿನಿನ ಮೂಲಕ ಅಥವಾ ಇಂಧನವನ್ನು ಸುಡುವ ಮೂಲಕ ಅಂಥ ವಾಹನವನ್ನು ನಡೆಸಲು ಶಕ್ತಿಯನ್ನು ಉತ್ಪಾದಿಸುವ ಯಾವುದೇ ವಿಧಾನದ ಮೂಲಕವಾಗಿಯಾಗಲಿ ಶಕ್ತಿ ಹೊಂದಿರುವ ಯಾವುದೇ ವಾಹನ;

(ಚ) "ಮಂಡಲಿ" ಎಂದರೆ ಕೇಂದ್ರ ಮಂಡಲಿ ಅಥವಾ ರಾಜ್ಯ ಮಂಡಲಿ;

(ಛ) "ಕೇಂದ್ರ ಮಂಡಲಿ" ಎಂದರೆ, ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ 1974ರ 3ನೇ ಪ್ರಕರಣದ ಮೇರೆಗೆ ರಚಿತವಾದ ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿನ ಕೇಂದ್ರ ಮಂಡಲಿ

(ಜ) "ಹೊಗೆ ಕೊಳವೆ" ಎಂಬುದರಲ್ಲಿ ಯಾವುದೇ ಮಾಲಿನ್ಯಕಾರಿ ವಸ್ತುವನ್ನು ಹೊರಹಾಕಬಹುದಾದ ಹೊಗೆಕಿಂಡಿ ಅಥವಾ ಹೊರ ದಾರಿಯನ್ನು ಹೊಂದಿರುವಂಥ ಯಾವುದೇ ರಚನೆಯನ್ನು ಒಳಗೊಳ್ಳುತ್ತದೆ;

(ಝ) "ನಿಯಂತ್ರಣ ಸಾಧನಸಾಮಗ್ರಿ" ಎಂದರೆ ಯಾವುದೇ ಮಾಲಿನ್ಯಕಾರಿ ವಸ್ತುವನ್ನು ಹೊರಬಿಡುವ ಗುಣಮಟ್ಟ ಮತ್ತು ರೀತಿಯನ್ನು ನಿಯಂತ್ರಿಸುವ ಯಾವುದೇ ಸಲಕರಣೆ, ಸಾಧನ, ಸಾಧನಸಾಮಗ್ರಿ ಅಥವಾ ಏರ್ಪಾಟು ಮತ್ತು ಅದರಲ್ಲಿ ಔದ್ಯಮಿಕ ಸ್ಥಿರಯಂತ್ರದ ಯಾವುದೇ ದಕ್ಷ ಪ್ರವರ್ತನೆಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಉಪಯೋಗಿಸಿದ ಯಾವುದೇ ಸಾಧನವನ್ನು ಒಳಗೊಳ್ಳುತ್ತದೆ;

(ಞ) "ಹೊರಬಿಡುವುದು" ಎಂದರೆ ಯಾವುದೇ ಹೊಗೆಕೊಳವೆ, ನಾಳ ಅಥವಾ ಹೊಗೆ ನಳಿಕೆ ಅಥವಾ ಇತರ ಯಾವುದೇ ಹೊರ ದಾರಿಯಿಂದ ಹೊರಬರುವ ಯಾವುದೇ ಘನ ಅಥವಾ ದ್ರವ ಅಥವಾ ಅನಿಲರೂಪದ ವಸ್ತು;

(ಟ) "ಔದ್ಯಮಿಕ ಸ್ಥಾವರ" ಎಂದರೆ ಯಾವುದೇ ಕೈಗಾರಿಕಾ ಅಥವಾ ವ್ಯಾಪಾರ ಉದ್ದೇಶಗಳಿಗಾಗಿ ಉಪಯೋಗಿಸಲಾಗುವ ಮತ್ತು ವಾತಾವರಣದಲ್ಲಿ ಯಾವುದೇ ವಾಯು ಮಾಲಿನ್ಯಕಾರಿ ವಸ್ತುವನ್ನು ಹೊರಬಿಡುವ ಯಾವುದೇ ಸ್ಥಾವರ;

(ಠ) "ಸದಸ್ಯ" ಎಂದರೆ ಸಂದರ್ಭಾನುಸಾರ, ಕೇಂದ್ರ ಮಂಡಲಿ ಅಥವಾ ರಾಜ್ಯ ಮಂಡಲಿಯ ಸದಸ್ಯ ಮತ್ತು ಅದರಲ್ಲಿ ಅಧ್ಯಕ್ಷನೂ ಒಳಗೊಳ್ಳುತ್ತಾನೆ;

(ಡ) ಯಾವುದೇ ಕಾರ್ಖಾನೆ ಅಥವಾ ಆವರಣಗಳಿಗೆ ಸಂಬಂಧಪಟ್ಟಂತೆ "ಅಧಿಭೋಗದಾರ" ಎಂದರೆ ಕಾರ್ಖಾನೆ ಅಥವಾ ಆವರಣಗಳ ವ್ಯವಹಾರಗಳ ಮೇಲೆ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿ ಮತ್ತು ಸದರಿ ವ್ಯವಹಾರಗಳನ್ನು ವ್ಯವಸ್ಥಾಪಕ ಏಜೆಂಟನಿಗೆ ವಹಿಸಲಾಗಿರುವಲ್ಲಿ, ಅಂಥ ಏಜೆಂಟನನ್ನು ಕಾರ್ಖಾನೆ ಅಥವಾ ಆವರಣಗಳ ಅಧಿಭೋಗದಾರನೆಂದು ಭಾವಿಸತಕ್ಕದ್ದು;

(ಢ) "ನಿಯಮಿಸಲಾದುದು" ಎಂದರೆ, ಸಂದರ್ಭಾನುಸಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಣ) "ರಾಜ್ಯ ಮಂಡಲಿ" ಎಂದರೆ,—

(i) ಯಾವ ರಾಜ್ಯದಲ್ಲಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 ಜಾರಿಯಲ್ಲಿರುವುದೋ ಮತ್ತು ರಾಜ್ಯ ಸರ್ಕಾರವು, ಆ ರಾಜ್ಯಕ್ಕಾಗಿ ಆ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ರಾಜ್ಯ ಮಂಡಲಿ ರಚಿಸಿದೆಯೋ ಆ ರಾಜ್ಯಕ್ಕೆ ಸಂಬಂಧಪಟ್ಟಂತೆ ಸದರಿ ರಾಜ್ಯ ಮಂಡಲಿ; ಮತ್ತು

(ii) ಯಾವುದೇ ಇತರ ರಾಜ್ಯಕ್ಕೆ ಸಂಬಂಧಿಸಿದಂತೆ ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಈ ಅಧಿನಿಯಮದ 5ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ರಾಜ್ಯ ಮಂಡಲಿ.

## ಅಧ್ಯಾಯ-II

### ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಮಂಡಲಿಗಳು

**3. ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಕೇಂದ್ರ ಮಂಡಲಿ:**–ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 (1974ರ 6)ರ 3ನೇ ಪ್ರಕರಣದ ಮೇರೆಗೆ ರಚಿತವಾದ ಕೇಂದ್ರ ಮಂಡಲಿಯು, ಆ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳ ಚಲಾವಣೆ ಮತ್ತು ಪ್ರಕಾರ್ಯಗಳ ನೆರವೇರಿಕೆಗೆ ಬಾಧಕವಾಗದಂತೆ ಈ ಅಧಿನಿಯಮದ ಮೇರೆಗಿನ ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕೇಂದ್ರ ಮಂಡಲಿಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**4. ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ರಾಜ್ಯ ಮಂಡಲಿಗಳು, ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ರಾಜ್ಯ ಮಂಡಲಿಗಳಾಗಿರತಕ್ಕದ್ದು:**—ಯಾವ ರಾಜ್ಯದಲ್ಲಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 (1974ರ 6) ಜಾರಿಯಲ್ಲಿರುವುದೋ ಮತ್ತು ಆ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರವು ಆ ರಾಜ್ಯಕ್ಕಾಗಿ ರಾಜ್ಯ ಮಂಡಲಿಯನ್ನು ರಚಿಸಿರುವುದೋ ಆ ಯಾವುದೇ ರಾಜ್ಯದಲ್ಲಿ, ಅಂಥ ರಾಜ್ಯ ಮಂಡಲಿಯನ್ನು, ಈ ಅಧಿನಿಯಮದ 5ನೇ ಪ್ರಕರಣದ ಮೇರೆಗೆ ರಚಿತವಾದ ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ರಾಜ್ಯ ಮಂಡಲಿ ಎಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಆ ರಾಜ್ಯ ಮಂಡಲಿಯು ಆ ಅಧಿನಿಯಮದ ಮೇರೆಗೆ ತನ್ನ ಅಧಿಕಾರಗಳ ಚಲಾವಣೆ ಮತ್ತು ಪ್ರಕಾರ್ಯಗಳ ನೆರವೇರಿಕೆಗೆ ಬಾಧಕವಾಗದಂತೆ ಈ ಅಧಿನಿಯಮದ ಮೇರೆಗಿನ ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ರಾಜ್ಯ ಮಂಡಲಿಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**5. ರಾಜ್ಯ ಮಂಡಲಿಗಳ ರಚನೆ:**—(1) ಯಾವ ರಾಜ್ಯದಲ್ಲಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 (1974ರ 6) ಜಾರಿಯಲ್ಲಿಲ್ಲವೋ ಅಥವಾ ಆ ಅಧಿನಿಯಮವು ಜಾರಿಯಲ್ಲಿದ್ದು, ಆದರೆ ಆ ಅಧಿನಿಯಮದ ಮೇರೆಗೆ, ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರವು ರಾಜ್ಯ ಮಂಡಲಿಯನ್ನು ರಚಿಸಿರುವುದಿಲ್ಲವೋ ಅಂಥ ಯಾವುದೇ ರಾಜ್ಯದಲ್ಲಿ, ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದು ಗೊತ್ತುಪಡಿಸುವಂಥ ದಿನಾಂಕದಿಂದ ಜಾರಿಗೆ ಬರುವಂತೆ ಆ ಮಂಡಲಿಗೆ ಈ ಅಧಿನಿಯಮದ ಮೇರೆಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಲು ಮತ್ತು ವಹಿಸಿದ ಪ್ರಕಾರ್ಯಗಳನ್ನು ನೆರವೇರಿಸಲು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಸರಿನಲ್ಲಿ ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ರಾಜ್ಯ ಮಂಡಲಿಯನ್ನು ರಚಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ರಚಿತವಾದ ರಾಜ್ಯ ಮಂಡಲಿಯು ಕೆಳಕಂಡ ಸದಸ್ಯರನ್ನು, ಎಂದರೆ:—

(ಕ) ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿಶೇಷ ಜ್ಞಾನ ಅಥವಾ ವ್ಯವಹಾರಿಕ ಅನುಭವ ಹೊಂದಿರುವ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡುವ ವ್ಯಕ್ತಿಯಾಗಿರುವ ಅಧ್ಯಕ್ಷನನ್ನು :

ಪರಂತು, ರಾಜ್ಯ ಸರ್ಕಾರವು ಸೂಕ್ತವೆಂದು ಯೋಚಿಸಬಹುದಾದಂತೆ ಅಧ್ಯಕ್ಷನು, ಪೂರ್ಣಕಾಲಿಕ ಅಥವಾ ಅಂಶಕಾಲಿಕ ಅಧ್ಯಕ್ಷನಾಗಿರಬಹುದು;

(ಖ) ಸರ್ಕಾರವನ್ನು ಪ್ರತಿನಿಧಿಸಲು ರಾಜ್ಯ ಸರ್ಕಾರವು ನಾಮ ನಿರ್ದೇಶಿಸಬೇಕಾದ, ರಾಜ್ಯ ಸರ್ಕಾರವು ಸೂಕ್ತವೆಂದು ಯೋಚಿಸಬಹುದಾದಂಥ ಐದಕ್ಕೆ ಮೀರದಷ್ಟು ಸಂಖ್ಯೆಯ ಅಧಿಕಾರಿಗಳನ್ನು ;

(ಗ) ರಾಜ್ಯದೊಳಗೆ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ಪ್ರಾಧಿಕಾರಿಗಳ ಸದಸ್ಯರೊಳಗಿಂದ ರಾಜ್ಯ ಸರ್ಕಾರವು ನಾಮ ನಿರ್ದೇಶಿಸಬೇಕಾದ, ರಾಜ್ಯ ಸರ್ಕಾರವು ಸೂಕ್ತವೆಂದು ಯೋಚಿಸುವಂಥ ಐದಕ್ಕೆ ಮೀರದಷ್ಟು ಸಂಖ್ಯೆಯ ವ್ಯಕ್ತಿಗಳನ್ನು;

(ಘ) ಕೃಷಿ, ಮೀನುಗಾರಿಕೆ ಅಥವಾ ಉದ್ಯಮ ಅಥವಾ ವ್ಯಾಪಾರ ಅಥವಾ ಕಾರ್ಮಿಕ ಹಿತಾಸಕ್ತಿಗಳನ್ನು ಅಥವಾ ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಪ್ರತಿನಿಧಿಸತಕ್ಕದೆಂಬಂಥ ಯಾವುದೇ ಇತರ ಹಿತಾಸಕ್ತಿಯನ್ನು ಪ್ರತಿನಿಧಿಸಲು ರಾಜ್ಯ ಸರ್ಕಾರವು ನಾಮ ನಿರ್ದೇಶಿಸಬೇಕಾದ, ರಾಜ್ಯ ಸರ್ಕಾರವು ಸೂಕ್ತವೆಂದು ಯೋಚಿಸಬಹುದಾದಂಥ ಮೂರಕ್ಕೆ ಮೀರದಷ್ಟು ಸಂಖ್ಯೆಯ ಅಧಿಕಾರೇತರರನ್ನು;

(ಙ) ರಾಜ್ಯ ಸರ್ಕಾರದ ಒಡೆತನದಲ್ಲಿರುವ, ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯಲ್ಲಿರುವ ಕಂಪೆನಿಗಳು ಅಥವಾ ನಿಗಮಗಳನ್ನು ಪ್ರತಿನಿಧಿಸಲು ಆ ರಾಜ್ಯ ಸರ್ಕಾರವು ನಾಮ ನಿರ್ದೇಶಿಸಬೇಕಾದ ಇಬ್ಬರು ವ್ಯಕ್ತಿಗಳನ್ನು;

(ಚ) ರಾಜ್ಯ ಸರ್ಕಾರವು ನೇಮಿಸಬೇಕಾದ ಪರಿಸರ ಸಂರಕ್ಷಣೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ವ್ಯಾವಹಾರಿಕ ಅನುಭವ ಮತ್ತು ಆಡಳಿತಾತ್ಮಕ ಅನುಭವ ಹೊಂದಿರುವ ಪೂರ್ಣಕಾಲಿಕ ಸದಸ್ಯ-ಕಾರ್ಯದರ್ಶಿಯನ್ನು,
—ಒಳಗೊಂಡಿರತಕ್ಕದು:

ಪರಂತು, ರಾಜ್ಯ ಸರ್ಕಾರವು, ಸದಸ್ಯರ ಪೈಕಿ ಇಬ್ಬರಿಗಿಂತ ಕಡಿಮೆಯಲ್ಲದಷ್ಟು ಸಂಖ್ಯೆಯ ಸದಸ್ಯರು ವಾಯುವಿನ ಗುಣಮಟ್ಟದ ಸಂಧಾರಣೆ ಅಥವಾ ವಾಯು ಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಪಟ್ಟಂತೆ, ವಿಶೇಷ ಜ್ಞಾನವುಳ್ಳ ಅಥವಾ ವ್ಯಾವಹಾರಿಕ ಅನುಭವವುಳ್ಳ ವ್ಯಕ್ತಿಗಳಾಗಿರುವುದನ್ನು ಖಚಿತಪಡಿಸಿಕೊಳ್ಳತಕ್ಕದು.

(3) ಈ ಅಧಿನಿಯಮದ ಮೇರೆಗೆ ರಚಿತವಾದ ಪ್ರತಿಯೊಂದು ರಾಜ್ಯ ಮಂಡಲಿಯು, ಸ್ವತ್ತನ್ನು ಆರ್ಜಿಸಲು ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳಲು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಅಧಿಕಾರ ದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದು ಹಾಗೂ ಸದರಿ ಹೆಸರಿನಲ್ಲಿ ದಾವೆ ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು.

**6.** ಕೇಂದ್ರ ಮಂಡಲಿಯು ಸಂಘ ರಾಜ್ಯ ಕ್ಷೇತ್ರಗಳಲ್ಲಿ ರಾಜ್ಯಮಂಡಲಿಯ ಅಧಿಕಾರಗಳನ್ನು ಚಲಾಯಿಸತಕ್ಕದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದು:—ಯಾವುದೇ ರಾಜ್ಯಮಂಡಲಿಯನ್ನು ಸಂಘ ರಾಜ್ಯ ಕ್ಷೇತ್ರಗಳಿಗಾಗಿ ರಚಿಸತಕ್ಕದಲ್ಲ ಮತ್ತು ಸಂಘ ರಾಜ್ಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಂದ್ರ ಮಂಡಲಿಯು ಆ ಸಂಘ ರಾಜ್ಯ ಕ್ಷೇತ್ರಕ್ಕಾಗಿ ಈ ಅಧಿನಿಯಮದ ಮೇರೆಗೆ ರಾಜ್ಯ ಮಂಡಲಿಯ ಅಧಿಕಾರಗಳನ್ನು ಚಲಾಯಿಸತಕ್ಕದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದು :

ಪರಂತು, ಯಾವುದೇ ಸಂಘ ರಾಜ್ಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಂದ್ರ ಮಂಡಲಿಯು ಈ ಪ್ರಕರಣದ ಮೇರೆಗಿನ ಅದರ ಎಲ್ಲಾ ಅಥವಾ ಯಾವುದೇ ಅಧಿಕಾರ ಮತ್ತು ಪ್ರಕಾರ್ಯವನ್ನು, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯಕ್ಕೆ ಪ್ರತ್ಯಾಯೋಜಿಸಬಹುದು.

**7.** ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು :—ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ ರಚಿಸಿದ ರಾಜ್ಯ ಮಂಡಲಿಯ ಸದಸ್ಯನು, ಅವನ ನಾಮನಿರ್ದೇಶನವನ್ನು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಿದಂಥ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದು :

ಪರಂತು, ಸದಸ್ಯನು, ಅವನ ಅವಧಿಯು ಮುಕ್ತಾಯವಾಗಿದಾಗ್ಯೂ, ಅವನ ಉತ್ತರಾಧಿಕಾರಿಯು ಅವನ ಪದವನ್ನು ವಹಿಸಿಕೊಳ್ಳುವವರೆಗೆ ಪದಧಾರಣ ಮಾಡುವುದು ಮುಂದುವರೆಯತಕ್ಕದು.

(2) ಈ ಅಧಿನಿಯಮದ ಮೇರೆಗೆ ರಚಿಸಿದ ಮತ್ತು 5ನೇ ಪ್ರಕರಣದ (2)ನೇ ಉಪಪ್ರಕರಣದ (ಖ) ಖಂಡ ಅಥವಾ (ಙ) ಖಂಡದ ಮೇರೆಗೆ ನಾಮನಿರ್ದೇಶಿತನಾದ ರಾಜ್ಯ ಮಂಡಲಿಯ ಸದಸ್ಯನ ಪದಾವಧಿಯು, ರಾಜ್ಯ ಸರ್ಕಾರದ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರದ ಒಡೆತನ, ನಿಯಂತ್ರಣ ಅಥವಾ ವ್ಯವಸ್ಥಾಪನೆಯಲ್ಲಿರುವ ಕಂಪನಿ ಅಥವಾ ನಿಗಮದ ಅಧೀನದಲ್ಲಿನ ಯಾವ ಪದವನ್ನು ಧಾರಣ ಮಾಡಿದ್ದ ಕಾರಣದಿಂದಾಗಿ ಅವನನ್ನು ನಾಮನಿರ್ದೇಶನ ಮಾಡಲಾಗಿತ್ತೋ ಆ ಪದವನ್ನು ಅವನು ಧಾರಣ ಮಾಡುವುದು ನಿಂತುಹೋದ ಕೂಡಲೇ ಕೊನೆಗೊಳ್ಳತಕ್ಕದು.

(3) ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ ರಚಿಸಿದ ರಾಜ್ಯಮಂಡಲಿಯ ಸದಸ್ಯನು, ಯಾವನೇ ಕಾಲದಲ್ಲಿ ಅವನು ರುಜು ಮಾಡಿದ ಬರಹದ ಮೂಲಕ,—

(ಕ) ಅಧ್ಯಕ್ಷನ ಸಂದರ್ಭದಲ್ಲಿ ರಾಜ್ಯ ಸರ್ಕಾರಕ್ಕೆ ; ಮತ್ತು

(ಖ) ಯಾವನೇ ಇತರ ಸದಸ್ಯನ ಸಂದರ್ಭದಲ್ಲಿ ರಾಜ್ಯ ಮಂಡಲಿಯ ಅಧ್ಯಕ್ಷನಿಗೆ ಸಂಬೋಧಿಸಿ ತನ್ನ ಪದಕ್ಕೆ ರಾಜೀನಾಮೆಯನ್ನು ಕೊಡಬಹುದು ಮತ್ತು ಅಧ್ಯಕ್ಷನ ಅಥವಾ ಅಂಥ ಇತರ ಸದಸ್ಯನ ಸ್ಥಾನವು ಆ ತರುವಾಯ ಖಾಲಿಯಾಗ ತಕ್ಕದು.

(4) ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ ರಚಿಸಿದ ರಾಜ್ಯಮಂಡಲಿಯ ಸದಸ್ಯನು, ಒಂದಾದ ಮೇಲೊಂದರಂತೆ ಬರುವ ರಾಜ್ಯಮಂಡಲಿಯ ಮೂರು ಸಭೆಗಳಿಗೆ ರಾಜ್ಯಮಂಡಲಿಯ ಅಭಿಪ್ರಾಯದಲ್ಲಿ ಸಾಕಷ್ಟು ಕಾರಣವಿಲ್ಲದೆ ಗೈರುಹಾಜರಾದರೆ ಅಥವಾ (5)ನೇ ಪ್ರಕರಣದ (2)ನೇ ಉಪಪ್ರಕರಣದ (ಗ) ಖಂಡದ ಮೇರೆಗೆ ಅವನು ನಾಮನಿರ್ದೇಶಿತನಾಗಿರುವಲ್ಲಿ, ಅವನು ಸ್ಥಳೀಯ ಪ್ರಾಧಿಕಾರದ ಸದಸ್ಯನಾಗಿರುವುದು ನಿಂತುಹೋದರೆ, ಅವನು ತನ್ನ ಸ್ಥಾನವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕದು ಮತ್ತು ಅಂಥ ಸ್ಥಾನವು ಖಾಲಿಯಾಗಿರುವುದು ಎರಡೂ ಸಂದರ್ಭದಲ್ಲಿ, ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದು.

(5) ಈ ಅಧಿನಿಯಮದ ಮೇರೆಗೆ ರಚಿಸಿದ ರಾಜ್ಯಮಂಡಲಿಯಲ್ಲಿನ ಆಕಸ್ಮಿಕ ಖಾಲಿಸ್ಥಾನವನ್ನು ಹೊಸ ನಾಮನಿರ್ದೇಶನದ ಮೂಲಕ ಭರ್ತಿ ಮಾಡತಕ್ಕುದು ಮತ್ತು ಆ ಖಾಲಿಸ್ಥಾನವನ್ನು ಭರ್ತಿ ಮಾಡಲು ನಾಮನಿರ್ದೇಶಿತನಾದ ವ್ಯಕ್ತಿಯು, ಅವನನ್ನು ಯಾವ ಸ್ಥಾನದಲ್ಲಿ ನಾಮನಿರ್ದೇಶನ ಮಾಡಲಾಗಿದೆಯೋ ಆ ಸದಸ್ಯನ ಉಳಿದಿರುವ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕುದು.

(6) ಈ ಅಧಿನಿಯಮದ ಮೇರೆಗೆ ರಚಿತವಾದ ರಾಜ್ಯಮಂಡಲಿಯ ಸದಸ್ಯನು ಎರಡು ಅವಧಿಗಳಿಗಿಂತ ಹೆಚ್ಚಿನ ಅವಧಿಗಳಿಗಾಗಿ ಪುನರ್ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕುದಲ್ಲ.

(7) ಈ ಅಧಿನಿಯಮದ ಮೇರೆಗೆ ರಚಿತವಾದ ರಾಜ್ಯಮಂಡಲಿಯ ಅಧ್ಯಕ್ಷ ಮತ್ತು (ಸದಸ್ಯ-ಕಾರ್ಯದರ್ಶಿಯನ್ನು ಹೊರತುಪಡಿಸಿ) ಇತರ ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂಥವು ಆಗಿರತಕ್ಕುದು.

**8.** .ಅನರ್ಹತೆಗಳು :—(1) (ಕ) ದಿವಾಳಿಯಾಗಿರುವ ಅಥವಾ ಯಾವುದೇ ಕಾಲದಲ್ಲಿ ದಿವಾಳಿಯೆಂದು ನ್ಯಾಯ ನಿರ್ಣೀತನಾದ, ಅಥವಾ

(ಖ) ಅಸ್ವಸ್ಥಚಿತ್ತನಾಗಿರುವ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿರುವ, ಅಥವಾ

(ಗ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಪತನವನ್ನೊಳಗೊಂಡ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ, ಅಥವಾ

(ಘ) ಈ ಅಧಿನಿಯಮದ ಮೇರೆಗಿನ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ ಅಥವಾ ಯಾವುದೇ ಕಾಲದಲ್ಲಿ ನಿರ್ಣೀತನಾಗಿದ್ದ, ಅಥವಾ

(ಙ) ತಾನಾಗಿಯೇ ಅಥವಾ ಯಾವನೇ ಪಾಲುಗಾರನ ಮೂಲಕ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಾಯುವಿನ ಗುಣಮಟ್ಟದ ಸುಧಾರಣೆಗಾಗಿ ಅಥವಾ ವಾಯುಮಾಲಿನ್ಯದ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕಾಗಿ ಯಂತ್ರಸಾಮಗ್ರಿ, ಔದ್ಯಮಿಕ ಸ್ಥಿರಯಂತ್ರ, ನಿಯಂತ್ರಣ ಸಾಧನಸಾಮಗ್ರಿ ಅಥವಾ ಯಾವುದೇ ಇತರ ಸಲಕರಣೆಯ ತಯಾರಿಕೆ. ಮಾರಾಟ ಅಥವಾ ಬಾಡಿಗೆಯ ವ್ಯವಹಾರವನ್ನು ನಡೆಸುತ್ತಿರುವ ಯಾವುದೇ ಫರ್ಮ್ ಅಥವಾ ಕಂಪನಿಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿರುವ, ಅಥವಾ

(ಚ) ಮಂಡಲಿಯೊಂದಿಗೆ ಅಥವಾ ಮಂಡಲಿಯನ್ನು ರಚಿಸಿದ ಸರ್ಕಾರದೊಂದಿಗೆ ಅಥವಾ ರಾಜ್ಯದಲ್ಲಿನ ಸ್ಥಳೀಯ ಪ್ರಾಧಿಕಾರದೊಂದಿಗೆ ಅಥವಾ ಸರ್ಕಾರದ ಒಡೆತನ, ನಿಯಂತ್ರಣ ಅಥವಾ ವ್ಯವಸ್ಥಾಪನೆಯಲ್ಲಿನ ಕಂಪನಿ ಅಥವಾ ನಿಗಮದೊಂದಿಗೆ ವಾಯುವಿನ ಗುಣಮಟ್ಟದ ಸುಧಾರಣೆಗಾಗಿ ಅಥವಾ ವಾಯುಮಾಲಿನ್ಯದ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕಾಗಿನ ಕಾರ್ಯಕ್ರಮಗಳನ್ನು ಈಡೇರಿಸುವುದಕ್ಕಾಗಿ ಯಾವುದೇ ಕರಾರನ್ನು ಹೊಂದಿರುವ ಯಾವುದೇ ಕಂಪನಿ ಅಥವಾ ಫರ್ಮಿನ ನಿರ್ದೇಶಕ ಅಥವಾ ಕಾರ್ಯದರ್ಶಿ, ವ್ಯವಸ್ಥಾಪಕ ಅಥವಾ ಇತರ ವೇತನ ಪಡೆಯುವ ಅಧಿಕಾರಿ ಅಥವಾ ನಿಯೋಜಿತನಾಗಿರುವ. ಅಥವಾ

(ಛ) ರಾಜ್ಯಸರ್ಕಾರದ ಅಭಿಪ್ರಾಯದಲ್ಲಿ, ಮಂಡಲಿಯಲ್ಲಿ ಅವನ ಮುಂದುವರಿಕೆಯು ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟು ಮಾಡುವ ಹಾಗೆ, ಸದಸ್ಯನಾಗಿ ಅವನ ಪದವನ್ನು ದುರುಪಯೋಗ ಮಾಡಿಕೊಂಡಿರುವ

—ಯಾವನೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ರಚಿಸಿದ ರಾಜ್ಯಮಂಡಲಿಯ ಸದಸ್ಯನಾಗಿರತಕ್ಕುದಲ್ಲ.

(2) ರಾಜ್ಯ ಸರ್ಕಾರವು, (1)ನೇ ಉಪ-ಪ್ರಕರಣದಲ್ಲಿ ಹೇಳಿರುವ ಯಾವುದೇ ಅನರ್ಹತೆಗೆ ಒಳಗಾಗಿರುವ ಅಥವಾ ಒಳಗಾದ ಯಾವನೇ ಸದಸ್ಯನನ್ನು ಬರಹದಲ್ಲಿನ ಆದೇಶದ ಮೂಲಕ ತೆಗೆದುಹಾಕಬಹುದು:

ಪರಂತು, ತೆಗೆದುಹಾಕುವ ಯಾವುದೇ ಆದೇಶವನ್ನು, ಸಂಬಂಧಪಟ್ಟ ಸದಸ್ಯನಿಗೆ ಅದರ ವಿರುದ್ಧ ಕಾರಣ ತೋರಿಸಲು ಯುಕ್ತ ಅವಕಾಶವನ್ನು ಕೊಡಲಾಗಿದ್ದ ಹೊರತು, ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಮಾಡತಕ್ಕುದಲ್ಲ.

(3) 7ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಥವಾ (6)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ತೆಗೆದುಹಾಕಲಾಗಿರುವ ಸದಸ್ಯನು, ಸಂದರ್ಭಾನುಸಾರ, ಅವನ ಉತ್ತರಾಧಿಕಾರಿಯು ಅವನ ಪದವನ್ನು ವಹಿಸಿಕೊಳ್ಳುವವರೆಗೆ ಪದಧಾರಣವನ್ನು ಮುಂದುವರಿಸಲು ಅಥವಾ ಸದಸ್ಯನಾಗಿ ಪುನರ್ ನಾಮ ನಿರ್ದೇಶನ ಹೊಂದಲು ಅರ್ಹನಾಗಿರತಕ್ಕುದಲ್ಲ.

**9.** ಸದಸ್ಯರು ಸ್ಥಾನಗಳನ್ನು ಖಾಲಿ ಮಾಡುವುದು:—ಈ ಅಧಿನಿಯಮದ ಮೇರೆಗೆ ರಚಿತವಾದ ರಾಜ್ಯ ಮಂಡಲಿಯ ಸದಸ್ಯನು, 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗೆ ಒಳಗಾದರೆ, ಅವನ ಸ್ಥಾನವು ಖಾಲಿಯಾಗತಕ್ಕುದು.

**10.** ಮಂಡಲಿಯ ಸಭೆಗಳು:—(1) ಈ ಅಧಿನಿಯಮದ ಉದ್ದೇಶಗಳಿಗಾಗಿ, ಮಂಡಲಿಯು ಪ್ರತಿ ಮೂರು ತಿಂಗಳಿಗೆ ಕನಿಷ್ಠ ಪಕ್ಷ ಒಂದು ಬಾರಿ ಸಭೆ ಸೇರತಕ್ಕುದು ಮತ್ತು ಅದರ ಸಭೆಗಳಲ್ಲಿ ವ್ಯವಹಾರವನ್ನು ನಡೆಸುವ ಬಗ್ಗೆ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕುದು :

ಪರಂತು, ಅಧ್ಯಕ್ಷನ ಅಭಿಪ್ರಾಯದಲ್ಲಿ ತುರ್ತು ಸ್ವರೂಪದ ಯಾವುದೇ ವ್ಯವಹಾರವನ್ನು ನಡೆಸಬೇಕಾಗಿದ್ದರೆ, ಅವನು ಹಿಂದೆ ಹೇಳಿದ ಉದ್ದೇಶಕ್ಕಾಗಿ ಸೂಕ್ತವೆಂದು ಯೋಚಿಸುವಂಥ ಕಾಲದಲ್ಲಿ ಮಂಡಲಿಯ ಸಭೆಯನ್ನು ಕರೆಯಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಸಭೆಗಳ ನಡವಳಿಕೆಗಳ ಪ್ರತಿಗಳನ್ನು ಕೇಂದ್ರ ಮಂಡಲಿಗೆ ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕುದು.

**11. ಸಮಿತಿಯ ರಚನೆ.**—(1) ಮಂಡಲಿಯು, ಅದು ಸೂಕ್ತವೆಂದು ಯೋಚಿಸಬಹುದಾದಂಥ ಉದ್ದೇಶ ಅಥವಾ ಉದ್ದೇಶಗಳಿಗಾಗಿ ಸದಸ್ಯರನ್ನೇ ಪೂರ್ಣವಾಗಿ, ಅಥವಾ ಭಾಗಶಃ ಸದಸ್ಯರನ್ನು ಮತ್ತು ಭಾಗಶಃ ಇತರ ವ್ಯಕ್ತಿಗಳನ್ನು ಒಳಗೊಂಡ ಮತ್ತು ಅದು ಸೂಕ್ತವೆಂದು ಯೋಚಿಸಬಹುದಾದಷ್ಟು ಸಮಿತಿಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿತವಾದ ಸಮಿತಿಯು ನಿಯಮಿಸಬಹುದಾದಂಥ ಕಾಲದಲ್ಲಿ ಮತ್ತು ಅಂಥ ಸ್ಥಳದಲ್ಲಿ ಸಭೆ ಸೇರತಕ್ಕದು ಮತ್ತು ಅದರ ಸಭೆಗಳಲ್ಲಿ ವ್ಯವಹಾರವನ್ನು ನಡೆಸುವ ಬಗ್ಗೆ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದು.

(3) ಸಮಿತಿಯ ಸದಸ್ಯರಿಗೆ (ಮಂಡಲಿಯ ಸದಸ್ಯರನ್ನು ಹೊರತುಪಡಿಸಿ) ಅದರ ಸಭೆಗೆ ಹಾಜರಾಗಿದ್ದಕ್ಕಾಗಿ ಮತ್ತು ಮಂಡಲಿಯ ಯಾವುದೇ ಇತರ ಕೆಲಸವನ್ನು ನಿರ್ವಹಿಸುವುದಕ್ಕಾಗಿ ನಿಯಮಿಸಬಹುದಾದಂಥ ಫೀಜುಗಳು ಮತ್ತು ಭತ್ಯೆಗಳನ್ನು ಸಂದಾಯ ಮಾಡತಕ್ಕದು.

**12. ನಿರ್ದಿಷ್ಟ ಉದ್ದೇಶಗಳಿಗಾಗಿ ಮಂಡಲಿಯೊಂದಿಗೆ ವ್ಯಕ್ತಿಗಳ ತಾತ್ಕಾಲಿಕ ಸಹವರ್ತನೆ :**—(1) ಮಂಡಲಿಯು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಈ ಅಧಿನಿಯಮದ ಮೇರೆಗೆ ಅದರ ಯಾವುದೇ ಪ್ರಕಾರ್ಯವನ್ನು ನೆರವೇರಿಸುವಲ್ಲಿ ಯಾವ ವ್ಯಕ್ತಿಯ ಸಹಾಯ ಅಥವಾ ಸಲಹೆಯನ್ನು ಪಡೆದುಕೊಳ್ಳಲು ಇಚ್ಛಿಸಬಹುದೋ ಆ ಯಾವನೇ ವ್ಯಕ್ತಿಯನ್ನು ತನ್ನೊಂದಿಗೆ ಸಹವರ್ತಿಸಿಕೊಳ್ಳಬಹುದು.

(2) ಯಾವುದೇ ಉದ್ದೇಶಕ್ಕಾಗಿ (1)ನೇ ಉಪ-ಪ್ರಕರಣದ ಮೇರೆಗೆ ಮಂಡಲಿಯೊಂದಿಗೆ ಸಹವರ್ತಿಯಾದ ವ್ಯಕ್ತಿಯು, ಆ ಉದ್ದೇಶಕ್ಕೆ ಸಂಗತವಾದ ಮಂಡಲಿಯ ಚರ್ಚೆಗಳಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದು. ಆದರೆ, ಆ ಮಂಡಲಿಯ ಸಭೆಯಲ್ಲಿ ಮತ ಚಲಾಯಿಸಲು ಹಕ್ಕನ್ನು ಹೊಂದಿರತಕ್ಕದಲ್ಲ ಮತ್ತು ಯಾವುದೇ ಇತರ ಉದ್ದೇಶಕ್ಕಾಗಿ ಆ ಮಂಡಲಿಯ ಸದಸ್ಯನಾಗಿರತಕ್ಕದಲ್ಲ.

(3) (1)ನೇ ಉಪ-ಪ್ರಕರಣದ ಮೇರೆಗೆ ಮಂಡಲಿಯೊಂದಿಗೆ ಸಹವರ್ತಿಯಾದ ವ್ಯಕ್ತಿಯು ನಿಯಮಿಸಬಹುದಾದಂಥ ಫೀಜುಗಳು ಮತ್ತು ಭತ್ಯಗಳನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದು.

**13. ಮಂಡಲಿಯಲ್ಲಿನ ಖಾಲಿಸ್ಥಾನವು ಕಾರ್ಯಗಳನ್ನು ಅಥವಾ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದಲ್ಲ:**—ಮಂಡಲಿಯ ಅಥವಾ ಅದರ ಯಾವುದೇ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು, ಸಂದರ್ಭಾನುಸಾರ, ಮಂಡಲಿ ಅಥವಾ ಅಂಥ ಸಮಿತಿಯಲ್ಲಿನ ಯಾವುದೇ ಖಾಲಿಸ್ಥಾನ ಕಾರಣದಿಂದ ಅಥವಾ ಮಂಡಲಿಯ ರಚನೆಯಲ್ಲಿನ ಯಾವುದೇ ದೋಷದ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದಲ್ಲ.

**14. ರಾಜ್ಯಮಂಡಲಿಗಳ ಸದಸ್ಯಕಾರ್ಯದರ್ಶಿ ಮತ್ತು ಅಧಿಕಾರಿಗಳು ಮತ್ತು ಇತರ ನಿಯೋಜಿತರು:**—(1) ಈ ಅಧಿನಿಯಮದ ಮೇರೆಗೆ ರಚಿತವಾದ ರಾಜ್ಯ ಮಂಡಲಿಯ ಸದಸ್ಯ ಕಾರ್ಯದರ್ಶಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂಥವು ಆಗಿರತಕ್ಕದು.

(2) ಈ ಅಧಿನಿಯಮದ ಮೇರೆಗೆ ರಚಿತವಾಗಿರಲಿ ಅಥವಾ ಇಲ್ಲದಿರಲಿ, ರಾಜ್ಯಮಂಡಲಿಯ ಸದಸ್ಯ ಕಾರ್ಯದರ್ಶಿಯು ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದು.

(3) ರಾಜ್ಯಸರ್ಕಾರವು ಈ ಬಗ್ಗೆ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ರಚಿತವಾಗಿರಲಿ ಅಥವಾ ಇಲ್ಲದಿರಲಿ, ರಾಜ್ಯ ಮಂಡಲಿಯು, ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳ ಸಮರ್ಥ ನಿರ್ವಹಣೆಗಾಗಿ ಅದು ಅವಶ್ಯವೆಂದು ಪರ್ಯಾಲೋಚಿಸುವಂಥ ಅಧಿಕಾರಿಗಳು ಮತ್ತು ಇತರ ನಿಯೋಜಿತರನ್ನು ನೇಮಕ ಮಾಡಬಹುದು.

(4) (3)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ರಾಜ್ಯಮಂಡಲಿಯ ಅಧಿಕಾರಿಗಳ (ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ) ಮತ್ತು ಇತರ ನಿಯೋಜಿತರ ನೇಮಕಾತಿ ರೀತಿ, ಸೇವಾ ಷರತ್ತುಗಳು ಮತ್ತು ವೇತನ ಶ್ರೇಣಿಗಳು, ಈ ಅಧಿನಿಯಮದ ಮೇರೆಗೆ ರಾಜ್ಯ ಮಂಡಲಿಯು ಮಾಡಿದ ವಿನಿಯಮನಗಳ ಮೂಲಕ ನಿರ್ಧರಿಸಲಾದಂತೆ ಇರತಕ್ಕದು.

(5) ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ರಚಿತವಾದ ರಾಜ್ಯ ಮಂಡಲಿಯು ಕಾಲಕಾಲಕ್ಕೆ ಮಂಡಲಿಯ ಸಮಾಲೋಚಕನನ್ನಾಗಿ ಯಾವನೇ ಅರ್ಹ ವ್ಯಕ್ತಿಯನ್ನು ನೇಮಕ ಮಾಡಬಹುದು ಮತ್ತು ಅದು ಸೂಕ್ತವೆಂದು ಯೋಚಿಸುವಂಥ ಸಂಬಳ ಮತ್ತು ಭತ್ಯೆಗಳು ಅಥವಾ ಫೀಜುಗಳನ್ನು ಅವನಿಗೆ ಸಂದಾಯ ಮಾಡಬಹುದು.

**15. ಅಧಿಕಾರಗಳ ಪ್ರತ್ಯಾಯೋಜನೆ:**—ರಾಜ್ಯಮಂಡಲಿಯು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳು, ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ಅದು ಅವಶ್ಯವೆಂದು ಭಾವಿಸಬಹುದಾದಂಥ, ಈ ಅಧಿನಿಯಮದ ಮೇರೆಗೆ ಅದರ ಅಂಥ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಅಧ್ಯಕ್ಷ ಅಥವಾ ಸದಸ್ಯ ಕಾರ್ಯದರ್ಶಿ ಅಥವಾ ಮಂಡಲಿಯ ಯಾವನೇ ಇತರ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

## ಅಧ್ಯಾಯ— III

### ಮಂಡಲಿಗಳ ಅಧಿಕಾರಗಳು ಮತ್ತು ಪ್ರಕಾರ್ಯಗಳು

**16. ಕೇಂದ್ರ ಮಂಡಲಿಯ ಪ್ರಕಾರ್ಯಗಳು:—** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮತ್ತು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974ರ ಮೇರೆಗೆ ತನ್ನ ಪ್ರಕಾರ್ಯಗಳ ನೇರವೇರಿಕೆಗೆ ಬಾಧಕವಾಗದಂತೆ, ವಾಯುವಿನ ಗುಣಮಟ್ಟವನ್ನು ಸುಧಾರಣೆ ಮಾಡುವುದು ಮತ್ತು ದೇಶದಲ್ಲಿ ವಾಯು ಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನ ಮಾಡುವುದು ಕೇಂದ್ರ ಮಂಡಲಿಯ ಮುಖ್ಯ ಪ್ರಕಾರ್ಯಗಳಾಗಿರತಕ್ಕದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಪ್ರಕಾರ್ಯದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಕೇಂದ್ರ ಮಂಡಲಿಯು—

(ಕ) ವಾಯುವಿನ ಗುಣಮಟ್ಟ ಸುಧಾರಣೆ ಮತ್ತು ವಾಯುಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಗೊಳಿಸುವುದಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ಕೊಡಬಹುದು ;

(ಖ) ವಾಯು ಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಗೊಳಿಸುವುದಕ್ಕೆ ಸಂಬಂಧಿಸಿದಂತೆ ರಾಷ್ಟ್ರವ್ಯಾಪಿ ಕಾರ್ಯಕ್ರಮವನ್ನು ಯೋಜಿಸಬಹುದು ಮತ್ತು ಅದನ್ನು ಕಾರ್ಯಗತಗೊಳಿಸುವಂತೆ ಮಾಡಬಹುದು ;

(ಗ) ರಾಜ್ಯ ಮಂಡಲಿಗಳ ಕಾರ್ಯ ಚಟುವಟಿಕೆಗಳನ್ನು ಸಮನ್ವಯಗೊಳಿಸಬಹುದು ಮತ್ತು ಅವುಗಳ ನಡುವೆ ಇರುವ ವಿವಾದಗಳನ್ನು ಬಗೆಹರಿಸಬಹುದು ;

(ಘ) ರಾಜ್ಯ ಮಂಡಲಿಗೆ ತಾಂತ್ರಿಕ ನೆರವು ಮತ್ತು ಮಾರ್ಗದರ್ಶನವನ್ನು ಒದಗಿಸಬಹುದು, ಜಲಮಾಲಿನ್ಯ ಸಮಸ್ಯೆಗಳು ಮತ್ತು ಜಲಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕೆ ಸಂಬಂಧಪಡುವ ತನಿಖೆಗಳನ್ನು ಮತ್ತು ಸಂಶೋಧನೆಯನ್ನು ನಡೆಸಬಹುದು ಮತ್ತು ಪ್ರಾರಂಭಿಸಬಹುದು ;

(ಙ) ಕೇಂದ್ರ ಮಂಡಲಿಯು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ವಾಯು ಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕಾಗಿ ಕಾರ್ಯಕ್ರಮಗಳನ್ನು ಯೋಜಿಸುವುದು ಮತ್ತು ಅಂಥ ಕಾರ್ಯಕ್ರಮಗಳಲ್ಲಿ ತೊಡಗಿರುವ ಅಥವಾ ತೊಡಗುವಂಥ ವ್ಯಕ್ತಿಗಳಿಗೆ ತರಬೇತಿಯನ್ನು ಯೋಜಿಸಬಹುದು ಮತ್ತು ವ್ಯವಸ್ಥೆಗೊಳಿಸಬಹುದು ;

(ಚ) ವಾಯುಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಗೊಳಿಸುವುದಕ್ಕೆ ಸಂಬಂಧಿಸಿದಂತೆ ಸಮೂಹ ಮಾಧ್ಯಮದ ಮುಖಾಂತರ ವ್ಯಾಪಕ ಕಾರ್ಯಕ್ರಮವನ್ನು ಏರ್ಪಡಿಸಬಹುದು ;

(ಛ) ವಾಯು ಮಾಲಿನ್ಯ ಮತ್ತು ಅದರ ಪರಿಣಾಮಕಾರಿ ನಿವಾರಣೆ ಮತ್ತು ನಿಯಂತ್ರಣ ಅಥವಾ ಉಪಶಮನಕ್ಕಾಗಿ ಯೋಜಿಸಿರುವ ಕ್ರಮಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಅಂಕಿ ಅಂಶಗಳ ಮಾಹಿತಿಗಳನ್ನು ಸಂಗ್ರಹಿಸಬಹುದು, ಸಂಕಲಿಸಬಹುದು ಮತ್ತು ಪ್ರಕಟಿಸಬಹುದು ಮತ್ತು ವಾಯು ಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಗೊಳಿಸುವುದಕ್ಕೆ ಸಂಬಂಧಪಟ್ಟ ಕೈಪಿಡಿಗಳು, ಸಂಹಿತೆಗಳು ಅಥವಾ ಮಾರ್ಗದರ್ಶಿಕೆಗಳನ್ನು ತಯಾರಿಸಬಹುದು ;

(ಜ) ವಾಯುವಿನ ಗುಣಮಟ್ಟಕ್ಕಾಗಿ ಮಾನಕಗಳನ್ನು ವಿಧಿಸಬಹುದು ;

(ಝ) ವಾಯುಮಾಲಿನ್ಯಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಬಹುದು ಮತ್ತು ಪ್ರಸಾರ ಮಾಡಬಹುದು :

(ಞ) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೇರವೇರಿಸಬಹುದು.

(3) ಕೇಂದ್ರ ಮಂಡಲಿಯು ಈ ಪ್ರಕರಣದ ಮೇರೆಗೆ ಅದರ ಪ್ರಕಾರ್ಯಗಳನ್ನು ಸಮರ್ಥವಾಗಿ ನೆರವೇರಿಸಲು ಅದಕ್ಕೆ ಸಾಧ್ಯವಾಗುವಂತೆ ಪ್ರಯೋಗಶಾಲೆ ಅಥವಾ ಪ್ರಯೋಗ ಶಾಲೆಗಳನ್ನು ಸ್ಥಾಪಿಸಬಹುದು ಅಥವಾ ಅವುಗಳಿಗೆ ಮನ್ನಣೆ ನೀಡಬಹುದು.

(4) ಕೇಂದ್ರ ಮಂಡಲಿಯು—

(ಕ) ಈ ಅಧಿನಿಯಮದ ಮೇರೆಗಿನ ಅದರ ಯಾವುದೇ ಪ್ರಕಾರ್ಯವನ್ನು ಅದು ನೇಮಕ ಮಾಡಿದ ಯಾವುದೇ ಸಮಿತಿಗೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಪ್ರತ್ಯಾಯೋಜಿಸಬಹುದು ;

(ಖ) ಅದರ ಪ್ರಕಾರ್ಯಗಳ ಸೂಕ್ತ ನಿರ್ವಹಣೆಗಾಗಿ ಮತ್ತು ಸಾಮಾನ್ಯವಾಗಿ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಅದು ಅವಶ್ಯವೆಂದು ಯೋಚಿಸಬಹುದಾದಂಥ ಇತರ ಕಾರ್ಯಗಳನ್ನು ಮಾಡಬಹುದು ಮತ್ತು ಅಂಥ ಇತರ ಕೆಲಸಗಳನ್ನು ನೇರವೇರಿಸಬಹುದು.

**17. ರಾಜ್ಯಮಂಡಲಿಗಳ ಪ್ರಕಾರ್ಯಗಳು:—**(1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಮತ್ತು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974ರ (1974ರ 6) ಮೇರೆಗೆ ಅದರ ಪ್ರಕಾರ್ಯಗಳು ಯಾವುವಾದರೂ ಇದ್ದರೆ, ಅವುಗಳ ನೇರವೇರಿಕೆಗೆ ಬಾಧಕವಾಗದಂತೆ—

(ಕ) ವಾಯು ಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಗೊಳಿಸುವುದಕ್ಕಾಗಿ ವ್ಯಾಪಕ ಕಾರ್ಯಕ್ರಮವನ್ನು ಯೋಜಿಸುವುದು ಮತ್ತು ಅದು ಕಾರ್ಯಗತವಾಗುವುದನ್ನು ಸುನಿಶ್ಚಿತಗೊಳಿಸುವುದು ;

(ಖ) ವಾಯುಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು;

(ಗ) ವಾಯುಮಾಲಿನ್ಯಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಪ್ರಸಾರ ಮಾಡುವುದು ;

(ಫ) ವಾಯುಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳಲ್ಲಿ ತೊಡಗಿರುವ ಅಥವಾ ತೊಡಗಬೇಕಾಗಿರುವ ವ್ಯಕ್ತಿಗಳಿಗೆ ತರಬೇತಿಯನ್ನು ಏರ್ಪಡಿಸುವುದರಲ್ಲಿ ಕೇಂದ್ರ ಮಂಡಲಿಯೊಂದಿಗೆ ಸಹಯೋಗಿಸುವುದು ಮತ್ತು ಅದಕ್ಕೆ ಸಂಬಂಧಪಟ್ಟ ಸಮೂಹ ಶಿಕ್ಷಣ ಕಾರ್ಯಕ್ರಮವನ್ನು ಸಂಘಟಿಸುವುದು;

(ಬ) ಯಾವುದೇ ನಿಯಂತ್ರಣ ಸಾಧನ ಸಾಮಗ್ರಿ, ಔದ್ಯಮಿಕ ಸ್ಥಾವರ ಅಥವಾ ತಯಾರಿಕಾ ಕಾರ್ಯವಿಧಾನವನ್ನು ಎಲ್ಲಾ ಸೂಕ್ತ ಕಾಲಗಳಲ್ಲಿ ಪರಿಶೀಲಿಸುವುದು ಮತ್ತು ವಾಯುಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕಾಗಿ ಅದು ಅವಶ್ಯವೆಂದು ಪರ್ಯಾಲೋಚಿಸುವಂಥ ವ್ಯಕ್ತಿಗಳಿಗೆ ಅಂಥ ನಿರ್ದೇಶನಗಳನ್ನು ಆದೇಶದ ಮೂಲಕ ಕೊಡುವುದು ;

(ಚ) ಅದು ಅವಶ್ಯಕವೆಂದು ಯೋಚಿಸಬಹುದಾದಂಥ ಮಧ್ಯಂತರಗಳಲ್ಲಿ ವಾಯು ಮಾಲಿನ್ಯ ನಿಯಂತ್ರಣ ಪ್ರದೇಶಗಳನ್ನು ಪರಿಶೀಲಿಸುವುದು, ಅದರಲ್ಲಿನ ವಾಯು ಗುಣಮಟ್ಟವನ್ನು ನಿರ್ಧರಿಸುವುದು ಮತ್ತು ಅಂಥ ಪ್ರದೇಶಗಳಲ್ಲಿ ವಾಯುಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕಾಗಿ ಕ್ರಮಗಳನ್ನು ಕೈಗೊಳ್ಳುವುದು;

(ಛ) ಕೇಂದ್ರ ಮಂಡಲಿಯೊಂದಿಗೆ ಸಮಾಲೋಚಿಸಿ ಮತ್ತು ಕೇಂದ್ರ ಮಂಡಲಿಯು ವಿಧಿಸಿದ ವಾಯು ಗುಣಮಟ್ಟಕ್ಕಾಗಿನ ಮಾನಕಗಳನ್ನು ಗಮನದಲ್ಲಿಟ್ಟುಕೊಂಡು ಔದ್ಯಮಿಕ ಸ್ಥಾವರಗಳು ಮತ್ತು ಮೋಟಾರು ವಾಹನಗಳಿಂದ ವಾತಾವರಣಕ್ಕೆ ವಾಯುಮಾಲಿನ್ಯಕಾರಿ ವಸ್ತುಗಳನ್ನು ಹೊರಬಿಡುವುದಕ್ಕಾಗಿ ಅಥವಾ ಹಡಗು ಅಥವಾ ವಿಮಾನವಾಗಿಲ್ಲದ ಯಾವುದೇ ಇತರ ಮೂಲದಿಂದ ವಾತಾವರಣಕ್ಕೆ ಯಾವುದೇ ವಾಯು ಮಾಲಿನ್ಯಕಾರಿ ವಸ್ತುವನ್ನು ಬಿಡುವುದಕ್ಕಾಗಿ ಮಾನಕಗಳನ್ನು ವಿಧಿಸುವುದು :

ಪರಂತು, ಅಂಥ ಔದ್ಯಮಿಕ ಸ್ಥಾವರಗಳಿಂದ ವಾತಾವರಣಕ್ಕೆ ಹೊರಬಿಡುವ ವಾಯುಮಾಲಿನ್ಯಕಾರಿ ವಸ್ತುಗಳ ಪ್ರಮಾಣ ಮತ್ತು ಸಮ್ಮಿಶ್ರಣವನ್ನು ಗಮನದಲ್ಲಿಟ್ಟುಕೊಂಡು ವಿವಿಧ ಔದ್ಯಮಿಕ ಸ್ಥಾವರಗಳಿಗಾಗಿ, ಹೊರಬಿಡುವುದಕ್ಕಾಗಿ, ಈ ಖಂಡದ ಮೇರೆಗೆ ವಿವಿಧ ಮಾನಕಗಳನ್ನು ವಿಧಿಸಬಹುದು;

(ಜ) ವಾಯುಮಾಲಿನ್ಯವನ್ನು ಉಂಟು ಮಾಡಬಹುದಾದ ಸಂಭವವಿರುವಂಥ ಯಾವುದೇ ಉದ್ಯಮವನ್ನು ನಡೆಸುವುದಕ್ಕಾಗಿ ಯಾವುದೇ ಆವರಣಗಳು ಅಥವಾ ಸ್ಥಳದ ಸೂಕ್ತತೆಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು;

(ಝ) ನಿಯಮಿಸಬಹುದಾದಂಥ ಅಥವಾ ಕೇಂದ್ರ ಮಂಡಲಿ ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅದಕ್ಕೆ ವಹಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು;

(ಞ) ಅದರ ಪ್ರಕಾರ್ಯಗಳನ್ನು ಸರಿಯಾಗಿ ನಿರ್ವಹಿಸುವುದಕ್ಕಾಗಿ ಮತ್ತು ಸಾಮಾನ್ಯವಾಗಿ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಉದ್ದೇಶದಿಂದ ಅದು ಅವಶ್ಯವೆಂದು ಯೋಚಿಸಬಹುದಾದಂಥ ಇತರ ಕಾರ್ಯಗಳನ್ನು ಮಾಡುವುದು ಮತ್ತು ಇತರ ಕೆಲಸಗಳನ್ನು ನೆರವೇರಿಸುವುದು.

—ಇವು ರಾಜ್ಯ ಮಂಡಲಿಯ ಪ್ರಕಾರ್ಯಗಳಾಗಿರತಕ್ಕದು.

(2) ರಾಜ್ಯ ಮಂಡಲಿಯು ಈ ಪ್ರಕರಣದ ಮೇರೆಗೆ ಅದರ ಪ್ರಕಾರ್ಯಗಳನ್ನು ಸಮರ್ಥವಾಗಿ ನೆರವೇರಿಸಲು ಅದಕ್ಕೆ ಸಾಧ್ಯವಾಗುವಂತೆ ಪ್ರಯೋಗಶಾಲೆ ಅಥವಾ ಪ್ರಯೋಗ ಶಾಲೆಗಳನ್ನು ಸ್ಥಾಪಿಸಬಹುದು ಅಥವಾ ಅವುಗಳಿಗೆ ಮನ್ನಣೆ ನೀಡಬಹುದು.

**18. ನಿರ್ದೇಶನಗಳನ್ನು ಕೊಡಲು ಅಧಿಕಾರ** :—ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ—

(ಕ) ಕೇಂದ್ರ ಮಂಡಲಿಯು, ಕೇಂದ್ರ ಸರ್ಕಾರವು ಅದಕ್ಕೆ ಬರಹದಲ್ಲಿ ಕೊಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದು; ಮತ್ತು

(ಖ) ಪ್ರತಿಯೊಂದು ರಾಜ್ಯ ಮಂಡಲಿಯು, ಕೇಂದ್ರ ಮಂಡಲಿ ಅಥವಾ ರಾಜ್ಯ ಸರ್ಕಾರವು ಅದಕ್ಕೆ ಬರಹದಲ್ಲಿ ಕೊಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದು:

ಪರಂತು, ರಾಜ್ಯ ಸರ್ಕಾರವು ಕೊಟ್ಟ ನಿರ್ದೇಶನವು ಕೇಂದ್ರ ಮಂಡಲಿಯು ಕೊಟ್ಟ ನಿರ್ದೇಶನಕ್ಕೆ ಅಸಂಗತವಾಗಿರುವಲ್ಲಿ, ಆ ವಿಷಯವನ್ನು ಕೇಂದ್ರ ಸರ್ಕಾರಕ್ಕೆ ಅದರ ತೀರ್ಮಾನಕ್ಕಾಗಿ ಒಪ್ಪಿಸತಕ್ಕದು.

## ಅಧ್ಯಾಯ—IV

## ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ

**19. ವಾಯು ಮಾಲಿನ್ಯ ನಿಯಂತ್ರಣ ಪ್ರದೇಶಗಳನ್ನು ಘೋಷಿಸಲು ಅಧಿಕಾರ.**— (1) ರಾಜ್ಯ ಸರ್ಕಾರವು ರಾಜ್ಯ ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ನಿಯಮಿಸಬಹುದಾದಂಥ ರೀತಿಯಲ್ಲಿ ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯದೊಳಗಿನ ಯಾವುದೇ ಪ್ರದೇಶ ಅಥವಾ ಪ್ರದೇಶಗಳನ್ನು ವಾಯು ಮಾಲಿನ್ಯ ನಿಯಂತ್ರಣ ಪ್ರದೇಶ ಅಥವಾ ಪ್ರದೇಶಗಳೆಂದು ಘೋಷಿಸಬಹುದು.

(2) ರಾಜ್ಯ ಸರ್ಕಾರವು, ರಾಜ್ಯ ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,—

(ಕ) ವಿಸ್ತರಿಸುವ ಅಥವಾ ಕಡಿಮೆ ಮಾಡುವ ಮೂಲಕ ಯಾವುದೇ ವಾಯುಮಾಲಿನ್ಯ ನಿಯಂತ್ರಣ ಪ್ರದೇಶವನ್ನು ಬದಲಾಯಿಸಬಹುದು ; ಅಥವಾ

(ಖ) ಹೊಸ ವಾಯುಮಾಲಿನ್ಯ ನಿಯಂತ್ರಣ ಪ್ರದೇಶವನ್ನು ಘೋಷಿಸಬಹುದು, ಅದರಲ್ಲಿ ಒಂದು ಅಥವಾ ಹೆಚ್ಚು ಅಸ್ತಿತ್ವದಲ್ಲಿರುವ ವಾಯು ಮಾಲಿನ್ಯ ನಿಯಂತ್ರಣ ಪ್ರದೇಶಗಳು ಅಥವಾ ಅದರ ಯಾವುದೇ ಭಾಗ ಅಥವಾ ಭಾಗಗಳನ್ನು ವಿಲೀನಗೊಳಿಸಬಹುದು.

(3) ರಾಜ್ಯ ಸರ್ಕಾರವು, ರಾಜ್ಯ ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ ಅನುಮೋದಿತ ಇಂಧನವನ್ನು ಹೊರತುಪಡಿಸಿ, ಯಾವುದೇ ವಾಯು ನಿಯಂತ್ರಣ ಪ್ರದೇಶ ಅಥವಾ ಅದರ ಭಾಗದಲ್ಲಿ ಅಥವಾ ಯಾವುದೇ ಇತರ ಇಂಧನದ ಉಪಯೋಗವು ವಾಯುಮಾಲಿನ್ಯವನ್ನುಂಟು ಮಾಡಬಹುದು ಅಥವಾ ಉಂಟುಮಾಡುವ ಸಂಭವವಿದೆಯೆಂದು ಅಭಿಪ್ರಾಯಪಟ್ಟರೆ ಅದು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ (ಆ ಅಧಿಸೂಚನೆಯ ಪ್ರಕಟಣೆಯ ದಿನಾಂಕದಿಂದ ಮೂರು ತಿಂಗಳುಗಳಿಗೆ ಕಡಿಮೆಯಲ್ಲದ ) ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಅಂಥ ಇಂಧನದ ಉಪಯೋಗವನ್ನು ನಿಷೇಧಿಸಬಹುದು.

(4) ರಾಜ್ಯ ಸರ್ಕಾರವು, ರಾಜ್ಯ ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಅನುಮೋದಿತ ಉಪಕರಣವನ್ನು ಹೊರತುಪಡಿಸಿ ಯಾವುದೇ ಉಪಕರಣವನ್ನು ವಾಯು ಮಾಲಿನ್ಯ ನಿಯಂತ್ರಣ ಪ್ರದೇಶದಲ್ಲಿರುವ ಆವರಣದಲ್ಲಿ ಉಪಯೋಗಿಸತಕ್ಕುದಲ್ಲವೆಂದು ನಿರ್ದೇಶಿಸಬಹುದು :

ಪರಂತು, ವಾಯುಮಾಲಿನ್ಯ ನಿಯಂತ್ರಣ ಪ್ರದೇಶದ ವಿವಿಧ ಭಾಗಗಳಿಗಾಗಿ ಅಥವಾ ವಿವಿಧ ಉಪಕರಣಗಳ ಉಪಯೋಗಕ್ಕಾಗಿ ವಿವಿಧ ದಿನಾಂಕಗಳನ್ನು ನಿರ್ದಿಷ್ಟಪಡಿಸಬಹುದು.

(5) ರಾಜ್ಯ ಸರ್ಕಾರವು, ರಾಜ್ಯ ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, ಯಾವುದೇ ವಾಯು ಮಾಲಿನ್ಯ ನಿಯಂತ್ರಣ ಪ್ರದೇಶ ಅಥವಾ ಅದರ ಭಾಗದಲ್ಲಿ (ಇಂಧನವಲ್ಲದ) ಯಾವುದೇ ಸಾಮಗ್ರಿಯನ್ನು ಸುಡುವುದರಿಂದ, ವಾಯುಮಾಲಿನ್ಯವುಂಟಾಗಬಹುದು ಅಥವಾ ಉಂಟಾಗುವ ಸಂಭವವಿದೆ ಎಂದು ಅಭಿಪ್ರಾಯಪಟ್ಟರೆ, ಅದು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಪ್ರದೇಶ ಅಥವಾ ಅದರ ಭಾಗದಲ್ಲಿ ಅಂಥ ಸಾಮಗ್ರಿಯನ್ನು ಸುಡುವುದನ್ನು ನಿಷೇಧಿಸಬಹುದು.

**20. ಮೋಟಾರು ವಾಹನಗಳಿಂದ ಹೊರಬಿಡುವಿಕೆಗಾಗಿ ಮಾನಕಗಳನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಅನುದೇಶಗಳನ್ನು ಕೊಡಲು ಅಧಿಕಾರ:**—17ನೇ ಪ್ರಕರಣದ (1)ನೇ ಉಪಪ್ರಕರಣದ (ಛ) ಖಂಡದ ಮೇರೆಗೆ ರಾಜ್ಯ ಮಂಡಲಿಯು ವಿಧಿಸಿದ ಮೋಟಾರು ವಾಹನಗಳಿಂದ ವಾಯು ಮಾಲಿನ್ಯಕಾರಿ ವಸ್ತುಗಳನ್ನು ಹೊರ ಬಿಡುವಿಕೆಗಾಗಿನ ಮಾನಕಗಳನ್ನು ಪಾಲಿಸುವುದನ್ನು ಸುನಿಶ್ಚಿತಗೊಳಿಸಿಕೊಳ್ಳುವ ದೃಷ್ಟಿಯಿಂದ, ರಾಜ್ಯ ಸರ್ಕಾರವು, ರಾಜ್ಯ ಮಂಡಲಿಯೊಂದಿಗೆ ಸಮಾಲೋಚಿಸಿ, ಮೋಟಾರು ವಾಹನಗಳ ಅಧಿನಿಯಮ, 1939ರ ಮೇರೆಗೆ ಮೋಟಾರು ವಾಹನಗಳ ನೋಂದಣಿಯ ಪ್ರಭಾರದಲ್ಲಿರುವ ಸಂಬಂಧಪಟ್ಟ ಪ್ರಾಧಿಕಾರಿಗೆ ಅವಶ್ಯವೆಂದು ಭಾವಿಸಬಹುದಾದಂಥ ಅನುದೇಶಗಳನ್ನು ಕೊಡತಕ್ಕುದು ಮತ್ತು ಅಂಥ ಪ್ರಾಧಿಕಾರಿಯು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅಂಥ ಅನುದೇಶಗಳನ್ನು ಪಾಲಿಸಲು ಬದ್ಧನಾಗಿರತಕ್ಕುದು.

**21 ಕೆಲವು ಔದ್ಯಮಿಕ ಸ್ಥಾವರಗಳ ಉಪಯೋಗದ ಮೇಲೆ ಪರಿಬಂಧಗಳು:**—(1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾವನೇ ವ್ಯಕ್ತಿಯು, ರಾಜ್ಯಮಂಡಲಿಯ ಪೂರ್ವ ಸಮ್ಮತಿಯಿಲ್ಲದೆ ವಾಯುಮಾಲಿನ್ಯ ನಿಯಂತ್ರಣ ಪ್ರದೇಶದಲ್ಲಿ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ಯಮದ ಉದ್ದೇಶಕ್ಕಾಗಿ ಯಾವುದೇ ಔದ್ಯಮಿಕ ಸ್ಥಾವರವನ್ನು ನಡೆಸತಕ್ಕುದಲ್ಲ.

(2) (1)ನೇ ಉಪ-ಪ್ರಕರಣದ ಮೇರೆಗೆ ರಾಜ್ಯಮಂಡಲಿಯ ಸಮ್ಮತಿಗಾಗಿನ ಅರ್ಜಿಯು ನಿಯಮಿಸಬಹುದಾದಂಥ ಫೀಜನ್ನೊಳಗೊಂಡಿರತಕ್ಕುದು ಮತ್ತು ನಿಯಮಿಸಿದ ನಮೂನೆಯಲ್ಲಿ ಅರ್ಜಿಯನ್ನು ಮಾಡಿಕೊಳ್ಳತಕ್ಕುದು ಮತ್ತು ಅದು ಔದ್ಯಮಿಕ ಸ್ಥಾವರದ ವಿವರಗಳು ಮತ್ತು ನಿಯಮಿಸಬಹುದಾದಂಥ ಇತರ ವಿವರಗಳನ್ನು ಒಳಗೊಂಡಿರತಕ್ಕುದು:

ಪರಂತು, ಯಾವನೇ ವ್ಯಕ್ತಿಯು, ಯಾವುದೇ ಪ್ರದೇಶವನ್ನು ವಾಯುಮಾಲಿನ್ಯ ನಿಯಂತ್ರಣ ಪ್ರದೇಶವೆಂದು ಘೋಷಿಸುವುದಕ್ಕೆ ನಿಕಟಪೂರ್ವದಲ್ಲಿ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ಯಮದ ಉದ್ದೇಶಕ್ಕಾಗಿ, ಅಂಥ ಪ್ರದೇಶದಲ್ಲಿ ಯಾವುದೇ ಔದ್ಯಮಿಕ ಸ್ಥಾವರವನ್ನು ನಡೆಸಿದಲ್ಲಿ, (ಅಂಥ ವ್ಯಕ್ತಿಯು ನಿಯಮಿಸಬಹುದಾದಂಥ ಅವಧಿಯೊಳಗೆ ಅಂಥ ಘೋಷಣೆಯ ದಿನಾಂಕದಿಂದ ಮೂರು ತಿಂಗಳುಗಳಿಗೆ ಕಡಿಮೆಯಿಲ್ಲದ) ಈ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ಮಾಡಿಕೊಳ್ಳತಕ್ಕುದು ಮತ್ತು ಅಂಥ ವ್ಯಕ್ತಿಯು ಅಂಥ ಅರ್ಜಿಯನ್ನು ಮಾಡಿಕೊಳ್ಳುವಲ್ಲಿ ಕೇಳಿಕೊಂಡ ಸಮ್ಮತಿಯನ್ನು ತಿರಸ್ಕರಿಸುವವರೆಗೆ ರಾಜ್ಯ ಮಂಡಲಿಯ ಸಮ್ಮತಿಯೊಂದಿಗೆ ಅಂಥ ಔದ್ಯಮಿಕ ಸ್ಥಾವರವನ್ನು ನಡೆಸುತ್ತಿರುವುದಾಗಿ ಭಾವಿಸತಕ್ಕುದು.

(3) ರಾಜ್ಯಮಂಡಲಿಯು, (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಸಮ್ಮತಿಗಾಗಿನ ಅರ್ಜಿಗೆ ಸಂಬಂಧಿಸಿದಂತೆ ಅದು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಬಹುದು ಮತ್ತು ಯಾವುದೇ ಅಂಥ ವಿಚಾರಣೆಯನ್ನು ಮಾಡುವಲ್ಲಿ, ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸತಕ್ಕುದು.

(4) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಸಮ್ಮತಿಗಾಗಿನ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ನಾಲ್ಕು ತಿಂಗಳ ಅವಧಿಯೊಳಗೆ, ರಾಜ್ಯಮಂಡಲಿಯು ಬರಹದಲ್ಲಿನ ಆದೇಶದ ಮೂಲಕ, ಆದೇಶದಲ್ಲಿ ಕಾರಣಗಳನ್ನು ದಾಖಲ್ಮಾಡಿ, ಕೇಳಿಕೊಂಡ ಸಮ್ಮತಿಯನ್ನು ಕೊಡತಕ್ಕುದು ಅಥವಾ ತಿರಸ್ಕರಿಸತಕ್ಕುದು.

(5) (4)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಮಂಡಲಿಯು ಯಾರಿಗೆ ಸಮ್ಮತಿಯನ್ನು ಕೊಡಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು, ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕುದು, ಎಂದರೆ:—

(i) ಈ ಬಗ್ಗೆ ರಾಜ್ಯಮಂಡಲಿಯು ಅನುಮೋದಿಸಬಹುದಾದಂಥ ತಪಶೀಲುಗಳ ನಿಯಂತ್ರಣ ಸಾಧನ ಸಾಮಗ್ರಿಯನ್ನು ಉದ್ಯಮವನ್ನು ನಡೆಸುತ್ತಿರುವ ಅಥವಾ ನಡೆಸಲು ಉದ್ದೇಶಿಸಿರುವ ಆವರಣದಲ್ಲಿ ಸ್ಥಾಪಿಸತಕ್ಕುದು ಮತ್ತು ನಡೆಸತಕ್ಕುದು;

(ii) ಅಸ್ತಿತ್ವದಲ್ಲಿರುವ ನಿಯಂತ್ರಣ ಸಾಧನಸಾಮಗ್ರಿ, ಯಾವುದಾದರೂ ಇದ್ದರೆ, ಅದನ್ನು ರಾಜ್ಯಮಂಡಲಿಯ ನಿರ್ದೇಶನಗಳಿಗನುಸಾರವಾಗಿ ಬದಲಾಯಿಸತಕ್ಕುದು ಅಥವಾ ಪ್ರತಿಸ್ಥಾಪಿಸತಕ್ಕುದು;

(iii) (i)ನೇ ಖಂಡ ಅಥವಾ (ii)ನೇ ಖಂಡದಲ್ಲಿ ಉಲ್ಲೇಖಿಸಿದ ನಿಯಂತ್ರಣ ಸಾಧನ ಸಾಮಗ್ರಿಯನ್ನು ಎಲ್ಲಾ ವೇಳೆಗಳಲ್ಲಿಯೂ ಉತ್ತಮ ಚಾಲನ ಸ್ಥಿತಿಯಲ್ಲಿಡತಕ್ಕದು;

(iv) ಈ ಬಗ್ಗೆ ರಾಜ್ಯಮಂಡಲಿಯು ಅನುಮೋದಿಸಬಹುದಾದಂಥ ತಪಶೀಲುಗಳ ಹೊಗೆಕೊಳವೆಯನ್ನು ಅವಶ್ಯವಾದಲೆಲ್ಲಾ ಅಂಥ ಆವರಣದಲ್ಲಿ ನಿರ್ಮಿಸತಕ್ಕದು ಅಥವಾ ಪುನರ್‌ನಿರ್ಮಿಸತಕ್ಕದು;

(v) ಈ ಬಗ್ಗೆ ರಾಜ್ಯ ಮಂಡಲಿಯು ನಿರ್ದಿಷ್ಟಪಡಿಸಬಹುದಾದಂಥ ಇತರ ಷರತ್ತುಗಳು; ಮತ್ತು

(vi) (i), (ii) ಮತ್ತು (iv)ನೇ ಖಂಡಗಳಲ್ಲಿ ಉಲ್ಲೇಖಿಸಿದ ಷರತ್ತುಗಳನ್ನು ಈ ಬಗ್ಗೆ ರಾಜ್ಯಮಂಡಲಿಯು ನಿರ್ದಿಷ್ಟ ಪಡಿಸಬಹುದಾದಂಥ ಅವಧಿಯೊಳಗೆ ಪಾಲಿಸತಕ್ಕದು:

ಪರಂತು, ವಾಯುಮಾಲಿನ್ಯ ನಿಯಂತ್ರಣ ಪ್ರದೇಶವೆಂದು ಅಂಥ ಪ್ರದೇಶವನ್ನು ಘೋಷಿಸಿದ ದಿನಾಂಕದ ನಿಕಟಪೂರ್ವದಲ್ಲಿ ವಾಯುಮಾಲಿನ್ಯ ನಿಯಂತ್ರಣ ಪ್ರದೇಶದಲ್ಲಿ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಉದ್ಯಮದ ಉದ್ದೇಶಕ್ಕಾಗಿ ಯಾವುದೇ ಔದ್ಯಮಿಕ ಸ್ಥಾವರವನ್ನು ನಡೆಸುತ್ತಿರುವ ವ್ಯಕ್ತಿಯ ಸಂದರ್ಭದಲ್ಲಿ ಹಾಗೆ ನಿರ್ದಿಷ್ಟಪಡಿಸಿದ ಅವಧಿಯು ಆರು ತಿಂಗಳುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ:

ಮತ್ತೂ ಪರಂತು,—

(ಕ) (i)ನೇ ಖಂಡದ ಮೇರೆಗಿನ ತಪಶೀಲುಗಳಿಗೆ ಅನುಸಾರವಾಗಿ ಯಾವುದೇ ನಿಯಂತ್ರಣ ಸಾಧನಸಾಮಗ್ರಿಯನ್ನು ಸ್ಥಾಪಿಸಿದ ತರುವಾಯ, ಅಥವಾ

(ಖ) (ii)ನೇ ಖಂಡದ ಮೇರೆಗೆ ರಾಜ್ಯಮಂಡಲಿಯ ನಿರ್ದೇಶನಗಳಿಗನುಸಾರವಾಗಿ, ಯಾವುದೇ ನಿಯಂತ್ರಣ ಸಾಧನಸಾಮಗ್ರಿಯನ್ನು ಬದಲಾಯಿಸಿದ ಅಥವಾ ಪ್ರತಿಸ್ಥಾಪಿಸಿದ ತರುವಾಯ, ಅಥವಾ

(ಗ) (iv)ನೇ ಖಂಡದ ಮೇರೆಗೆ ಯಾವುದೇ ಹೊಗೆ ಕೊಳವೆಯನ್ನು ನಿರ್ಮಿಸಿದ ಅಥವಾ ಪುನರ್‌ನಿರ್ಮಿಸಿದ ತರುವಾಯ,—

—ರಾಜ್ಯಮಂಡಲಿಯ ಪೂರ್ವಾನುಮೋದನೆಯಿಂದಲ್ಲದೆ ಯಾವುದೇ ನಿಯಂತ್ರಣ ಸಾಧನಸಾಮಗ್ರಿಯನ್ನು ಅಥವಾ ಹೊಗೆಕೊಳವೆಯನ್ನು ಬದಲಾಯಿಸತಕ್ಕದಲ್ಲ ಅಥವಾ ಪ್ರತಿಸ್ಥಾಪಿಸತಕ್ಕದಲ್ಲ ಅಥವಾ ಸಂದರ್ಭಾನುಸಾರ ಆದನ್ನು ನಿರ್ಮಿಸತಕ್ಕದಲ್ಲ ಅಥವಾ ಪುನ: ನಿರ್ಮಿಸತಕ್ಕದಲ್ಲ.

(6) ಯಾವುದೇ ತಾಂತ್ರಿಕ ಸಂಧಾರಣೆಯಿಂದಾಗಿ ಅಥವಾ ಅನ್ಯಥಾ (5)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಎಲ್ಲಾ ಅಥವಾ ಯಾವುವೇ ಷರತ್ತುಗಳಲ್ಲಿ (ಯಾವುದೇ ನಿಯಂತ್ರಣ ಸಾಧನ ಸಾಮಗ್ರಿಯಲ್ಲಿ ಪೂರ್ಣವಾಗಿ ಇಲ್ಲವೇ ಭಾಗಶ: ಬದಲಾವಣೆಯನ್ನು ಒಳಗೊಂಡು) ವ್ಯತ್ಯಾಸವು ಅಗತ್ಯವೆಂದು ರಾಜ್ಯಮಂಡಲಿಯು ಅಭಿಪ್ರಾಯಪಟ್ಟರೆ, ರಾಜ್ಯಮಂಡಲಿಯು ಯಾರಿಗೆ ಸಮ್ಮತಿಯನ್ನು ಕೊಡಲಾಗಿದೆಯೋ ಆ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಅಂಥ ಎಲ್ಲಾ ಅಥವಾ ಯಾವುವೇ ಷರತ್ತುಗಳನ್ನು ವ್ಯತ್ಯಸ್ತಗೊಳಿಸತಕ್ಕದು ಮತ್ತು ಆ ತರುವಾಯ ಅಂಥ ವ್ಯಕ್ತಿಯು ಹಾಗೆ ವ್ಯತ್ಯಸ್ತಗೊಳಿಸಿದಂತೆ ಷರತ್ತುಗಳನ್ನು ಪಾಲಿಸಲು ಬದ್ಧನಾಗಿರತಕ್ಕದು.

(7) (4)ನೇ ಉಪ-ಪ್ರಕರಣದ ಮೇರೆಗೆ ರಾಜ್ಯಮಂಡಲಿಯು ಯಾರಿಗೆ ಸಮ್ಮತಿಯನ್ನು ಕೊಟ್ಟಿದೆಯೋ ಆ ವ್ಯಕ್ತಿಯು ಯಾವನೇ ಇತರ ವ್ಯಕ್ತಿಗೆ ಉದ್ಯಮದಲ್ಲಿನ ಅವನ ಹಿತಾಸಕ್ತಿಯನ್ನು ವರ್ಗಾವಣೆ ಮಾಡಿರುವಲ್ಲಿ, ಅಂಥ ಸಮ್ಮತಿಯನ್ನು ಅಂಥ ಇತರ ವ್ಯಕ್ತಿಗೆ ಕೊಡಲಾಗಿದೆಯೆಂದು ಭಾವಿಸತಕ್ಕದು ಮತ್ತು ಅವನು, ಅವನಿಗೆ ಮೂಲತ: ಆ ಸಮ್ಮತಿಯನ್ನು ಕೊಟ್ಟಿದ್ದಿದ್ದರೆ ಹೇಗೋ ಹಾಗೆ ಯಾವ ಷರತ್ತುಗಳಿಗೊಳಪಟ್ಟು ಅದನ್ನು ಕೊಡಲಾಗಿದೆಯೋ ಆ ಎಲ್ಲಾ ಷರತ್ತುಗಳನ್ನು ಪಾಲಿಸಲು ಅವನು ಬದ್ಧನಾಗಿರತಕ್ಕದು.

**22. ಉದ್ಯಮ, ಮುಂತಾದವುಗಳನ್ನು ನಡೆಸುತ್ತಿರುವ ವ್ಯಕ್ತಿಗಳು ವಾಯು ಮಾಲಿನ್ಯಕಾರಿ ವಸ್ತುಗಳನ್ನು ರಾಜ್ಯ ಮಂಡಲಿಯು ವಿಧಿಸಿದ ಮಾನಕಗಳಿಗಿಂತ ಹೆಚ್ಚಾಗಿ ಹೊರಬಿಡಲು ಅವಕಾಶ ಕೊಡತಕ್ಕದ್ದಲ್ಲ** :—ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ಯಮವನ್ನು ನಡೆಸುತ್ತಿರುವ ಅಥವಾ ವಾಯು ಮಾಲಿನ್ಯ ನಿಯಂತ್ರಣ ಪ್ರದೇಶದಲ್ಲಿ ಯಾವುದೇ ಔದ್ಯಮಿಕ ಸ್ಥಾವರವನ್ನು ನಡೆಸುತ್ತಿರುವ ಯಾವನೇ ವ್ಯಕ್ತಿಯು, 17ನೇ ಪ್ರಕರಣದ (1)ನೇ ಉಪ-ಪ್ರಕರಣದ (ಛ) ಖಂಡದ ಮೇರೆಗೆ ರಾಜ್ಯ ಮಂಡಲಿಯು ವಿಧಿಸಿದ ಮಾನಕಗಳಿಗಿಂತ ಹೆಚ್ಚಿಗೆಯಾಗಿ ಯಾವುದೇ ಮಾಲಿನ್ಯಕಾರಿ ವಸ್ತುವನ್ನು ಹೊರಹಾಕತಕ್ಕದ್ದಲ್ಲ ಅಥವಾ ಹೊರಹಾಕುವಂತೆ ಮಾಡತಕ್ಕದ್ದಲ್ಲ ಅಥವಾ ಹೊರಹಾಕಲು ಅವನಿಗೆ ಅವಕಾಶ ಕೊಡತಕ್ಕದ್ದಲ್ಲ.

**23. ಕೆಲವು ಸಂದರ್ಭಗಳಲ್ಲಿ ರಾಜ್ಯಮಂಡಲಿ ಮತ್ತು ಇತರ ಏಜೆನ್ಸಿಗಳಿಗೆ ಮಾಹಿತಿಯನ್ನು ಒದಗಿಸುವುದು** :— (1) ಯಾವುದೇ ವಾಯು ಮಾಲಿನ್ಯ ನಿಯಂತ್ರಣ ಪ್ರದೇಶದಲ್ಲಿ, ರಾಜ್ಯ ಮಂಡಲಿಯು ವಿಧಿಸಿದ ಮಾನಕಗಳಿಗಿಂತ ಹೆಚ್ಚಾಗಿ ವಾತಾವರಣಕ್ಕೆ ಯಾವುದೇ ವಾಯು ಮಾಲಿನ್ಯಕಾರಿ ವಸ್ತುವನ್ನು ಹೊರಬಿಡುವುದು ಸಂಭವಿಸುವಲ್ಲಿ ಅಥವಾ ಆಕಸ್ಮಿಕ ಅಥವಾ ಇತರ ಮುಂಗಾಣದ ಕಾರ್ಯ ಅಥವಾ ಘಟನೆಯಿಂದಾಗಿ ಸಂಭವಿಸುವ ಶಂಕೆಯಿರುವಲ್ಲಿ, ಯಾವ ಆವರಣದಿಂದ ಹೊರಬಿಡುವಿಕೆಯು ಸಂಭವಿಸುವುದೋ ಅಥವಾ ಸಂಭವಿಸುವ ಶಂಕೆಯಿರುವುದೋ ಆ ಆವರಣದ ಪ್ರಭಾರದಲ್ಲಿರುವ ವ್ಯಕ್ತಿಯು ಅಂಥ ಸಂಭವದ ಅಥವಾ ಅಂಥ ಸಂಭವದ ಶಂಕೆಯ ಸಂಗತಿಯನ್ನು ರಾಜ್ಯಮಂಡಲಿಗೆ ಮತ್ತು ನಿಯಮಿಸಬಹುದಾದಂಥ ಪ್ರಾಧಿಕಾರಿಗಳಿಗೆ ಅಥವಾ ಏಜೆನ್ಸಿಗಳಿಗೆ ತಕ್ಷಣವೇ ತಿಳಿಸತಕ್ಕದು.

(2) (1)ನೇ ಉಪ-ಪ್ರಕರಣದ ಮೇರೆಗೆ ತಿಳಿವಳಿಕೆಯ ಮೂಲಕವಾಗಿಯಾಗಲಿ ಅಥವಾ ಅನ್ಯಥಾ ಆಗಲಿ ಆ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಸ್ವರೂಪದ ಯಾವುದೇ ಸಂಭವಿಸುವಿಕೆಯ ಸಂಗತಿ ಅಥವಾ ಶಂಕೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ರಾಜ್ಯಮಂಡಲಿ ಮತ್ತು ಪ್ರಾಧಿಕಾರಿಗಳು ಅಥವಾ ಏಜೆನ್ಸಿಗಳು, ಕಾರ್ಯಸಾಧ್ಯವಾದಷ್ಟು ಬೇಗ ಅಂಥ ವಾಯುಮಾಲಿನ್ಯಕಾರಿ ವಸ್ತುಗಳನ್ನು ಹೊರಬಿಡುವುದನ್ನು ಕಡಿಮೆ ಮಾಡಲು ಅವಶ್ಯವಾದಂಥ ಪರಿಹಾರಕ ಕ್ರಮಗಳನ್ನು ಕೈಗೊಳ್ಳುವಂತೆ ಮಾಡತಕ್ಕದು

(3) (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಪರಿಹಾರ ಕ್ರಮಗಳಿಗೆ ಸಂಬಂಧಿಸಿದಂತೆ ರಾಜ್ಯಮಂಡಲಿ, ಪ್ರಾಧಿಕಾರ ಅಥವಾ ಏಜೆನ್ಸಿಯು ವಹಿಸಿದ ವೆಚ್ಚಗಳು, ಯಾವುವಾದರೂ ಇದ್ದರೆ ಅವುಗಳನ್ನು (ರಾಜ್ಯಸರ್ಕಾರವು ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ಯುಕ್ತ ದರದಲ್ಲಿ)ಬಡ್ಡಿಯೊಂದಿಗೆ ವೆಚ್ಚಗಳಿಗೆ ತಗಾದೆ ಮಾಡಿದ ದಿನಾಂಕದಿಂದ ಅದನ್ನು ಸಂದಾಯ ಮಾಡುವವರೆಗೆ ಬಡ್ಡಿಯೊಂದಿಗೆ ಸಂಬಂಧಪಟ್ಟ ವ್ಯಕ್ತಿಯಿಂದ ಆ ಮಂಡಲಿ, ಪ್ರಾಧಿಕಾರ ಅಥವಾ ಏಜೆನ್ಸಿಯು ಭೂ ಕಂದಾಯದ ಬಾಕಿ ಅಥವಾ ಸರ್ಕಾರಿ ತಗಾದೆಯಂತೆ ವಸೂಲಿ ಮಾಡಬಹುದು.

**24. ಪ್ರವೇಶ ಮತ್ತು ಪರಿಶೀಲನೆಯ ಅಧಿಕಾರ** :—ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಬಗ್ಗೆ ರಾಜ್ಯಮಂಡಲಿಯು ಶಕ್ತಗೊಳಿಸಿದ ಯಾವನೇ ವ್ಯಕ್ತಿಯು, ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ಸಹಾಯದೊಂದಿಗೆ ಎಲ್ಲಾ ಯುಕ್ತ ಕಾಲಗಳಲ್ಲಿಯೂ ಯಾವುದೇ ಸ್ಥಳವನ್ನು,—

(ಕ) ಅವನಿಗೆ ವಹಿಸಿಕೊಟ್ಟ ರಾಜ್ಯ ಮಂಡಲಿಯ ಯಾವುದೇ ಪ್ರಕಾರ್ಯವನ್ನು ನೆರವೇರಿಸುವ ಉದ್ದೇಶಕ್ಕಾಗಿ;

(ಖ) ಅಂಥ ಯಾವುದೇ ಪ್ರಕಾರ್ಯಗಳನ್ನು ನೆರವೇರಿಸಬೇಕೋ ಹೇಗೆ ಮತ್ತು ಹಾಗಿದ್ದರೆ ಯಾವ ರೀತಿಯಲ್ಲಿ ನೆರವೇರಿಸಬೇಕು ಎಂಬುದನ್ನು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಯಾವುವೇ ಉಪಬಂಧಗಳು ಅಥವಾ ಈ ಅಧಿನಿಯಮದ ಮೇರೆಗೆ ಜಾರಿ ಮಾಡಿದ, ಕೊಟ್ಟ ಅಥವಾ ಮಂಜೂರ್ಮಾಡಿದ ಯಾವುದೇ ನೋಟೀಸು, ಆದೇಶ, ನಿರ್ದೇಶನ ಅಥವಾ ಅಧಿಕೃತಗೊಳಿಸುವಿಕೆಯನ್ನು ಪಾಲಿಸಲಾಗುತ್ತಿದೆಯೋ ಅಥವಾ ಪಾಲಿಸಲಾಗಿದೆಯೋ ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ ;

(ಗ) ಯಾವುದೇ ನಿಯಂತ್ರಣ ಸಾಧನ ಸಾಮಗ್ರಿ, ಔದ್ಯಮಿಕ ಸ್ಥಾವರ, ದಾಖಲೆ, ರಿಜಿಸ್ಟರ್, ದಸ್ತಾವೇಜು ಅಥವಾ ಯಾವುದೇ ಇತರ ಭೌತಿಕ ವಸ್ತುವನ್ನು ಪರೀಕ್ಷಿಸುವ ಮತ್ತು ಉಪ-ಪರೀಕ್ಷಿಸುವ ಉದ್ದೇಶಕ್ಕಾಗಿ ಅಥವಾ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗಿನ ಅಪರಾಧವನ್ನು ಮಾಡಲಾಗಿದೆ ಅಥವಾ ಮಾಡಲಾಗುತ್ತಿದೆ ಅಥವಾ ಮಾಡಲಿರುವುದಾಗಿ ನಂಬಲು ಅವನು ಕಾರಣ ಹೊಂದಿರುವಂಥ ಯಾವುದೇ ಸ್ಥಳದ ಶೋಧನೆ ನಡೆಸುವುದಕ್ಕಾಗಿ ಮತ್ತು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ದಂಡನೀಯವಾದ ಅಪರಾಧ ಮಾಡಿರುವುದರ ಬಗ್ಗೆ ಅದು ಸಾಕ್ಷ್ಯವನ್ನು ಒದಗಿಸಬಹುದೆಂದು ನಂಬಲು ಅವನಿಗೆ ಕಾರಣವಿರುವಂಥ ಯಾವುದೇ ನಿಯಂತ್ರಣ ಸಾಧನಸಾಮಗ್ರಿ ಔದ್ಯಮಿಕ ಸ್ಥಾವರ, ದಾಖಲೆ, ರಿಜಿಸ್ಟರ್, ದಸ್ತಾವೇಜು ಅಥವಾ ಇತರ ಭೌತಿಕ ವಸ್ತುವನ್ನು ಅಭಿಗ್ರಹಿಸುವುದಕ್ಕಾಗಿ

—ಪ್ರವೇಶಿಸಲು ಹಕ್ಕನ್ನು ಹೊಂದಿರತಕ್ಕುದು.

(2) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ಯಮವನ್ನು ನಡೆಸುತ್ತಿರುವ ಯಾವನೇ ವ್ಯಕ್ತಿಯು ಮತ್ತು ವಾಯುಮಾಲಿನ್ಯ ನಿಯಂತ್ರಣ ಪ್ರದೇಶದಲ್ಲಿ ಯಾವುದೇ ನಿಯಂತ್ರಣ ಸಾಧನಸಾಮಗ್ರಿ ಅಥವಾ ಯಾವುದೇ ಔದ್ಯಮಿಕ ಸ್ಥಾವರವನ್ನು ನಡೆಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು, (1)ನೇ ಉಪ-ಪ್ರಕರಣದ ಮೇರೆಗೆ ಆ ಪ್ರಕಾರ್ಯಗಳನು ನಡೆಸುವುದಕ್ಕಾಗಿ ಆ ಉಪ-ಪ್ರಕರಣದ ಮೇರೆಗೆ ರಾಜ್ಯ ಮಂಡಲಿಯು ಶಕ್ತಗೊಳಿಸಿದ ವ್ಯಕ್ತಿಗೆ ಎಲ್ಲಾ ಸಹಾಯವನ್ನು ಕೊಡಲು ಬದ್ಧನಾಗಿರತಕ್ಕುದು ಮತ್ತು ಯಾವುದೇ ಯುಕ್ತ ಕಾರಣ ಅಥವಾ ನೆಪವಿಲ್ಲದೆ ಹಾಗೆ ಮಾಡಲು ಅವನು ತಪ್ಪಿದರೆ, ಅವನು ಈ ಅಧಿನಿಯಮದ ಮೇರೆಗಿನ ಅಪರಾಧದ ಬಗ್ಗೆ ತಪ್ಪಿತಸ್ಥನಾಗತಕ್ಕುದು.

(3) ಯಾವನೇ ವ್ಯಕ್ತಿಯು, (1)ನೇ ಉಪ-ಪ್ರಕರಣದ ಮೇರೆಗೆ ರಾಜ್ಯಮಂಡಲಿಯು ಶಕ್ತಗೊಳಿಸಿದ ಯಾವನೇ ವ್ಯಕ್ತಿಗೆ ಅವನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ, ಉದ್ದೇಶಪೂರ್ವಕವಾಗಿ ವಿಳಂಬವನ್ನುಂಟು ಮಾಡಿದರೆ ಅಥವಾ ಅಡ್ಡಿಪಡಿಸಿದರೆ, ಅವನು ಈ ಅಧಿನಿಯಮದ ಮೇರೆಗಿನ ಅಪರಾಧದ ಬಗ್ಗೆ ತಪ್ಪಿತಸ್ಥನಾಗತಕ್ಕುದು.

(4) ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಉಪಬಂಧಗಳು ಅಥವಾ ಜಮ್ಮು ಮತ್ತು ಕಾಶ್ಮೀರ ರಾಜ್ಯ ಅಥವಾ ಆ ಸಂಹಿತೆಯು ಜಾರಿಯಲ್ಲಿರದ ಯಾವುದೇ ಪ್ರದೇಶಕ್ಕೆ ಸಂಬಂಧಪಟ್ಟಂತೆ, ಆ ರಾಜ್ಯ ಅಥವಾ ಪ್ರದೇಶದಲ್ಲಿ ಜಾರಿಯಲ್ಲಿರುವ ಯಾವುದೇ ಸಂವಾದಿ ಕಾನೂನಿನ ಉಪಬಂಧಗಳು, ಸದರಿ ಸಂಹಿತೆಯ 94ನೇ ಪ್ರಕರಣದ ಮೇರೆಗೆ ಅಥವಾ ಸಂದರ್ಭಾನುಸಾರ ಸದರಿ ಕಾನೂನಿನ ಸಂವಾದಿ ಉಪಬಂಧಗಳ ಮೇರೆಗೆ ಹೊರಡಿಸಿದ ವಾರಂಟಿನ ಅಧಿಕಾರದ ಮೇರೆಗೆ ಮಾಡಿದ ಯಾವುದೇ ಶೋಧನೆ ಅಥವಾ ಅಭಿಗ್ರಹಣಕ್ಕೆ ಅವು ಅನ್ವಯವಾಗುವಂತೆ ಈ ಪ್ರಕರಣದ ಮೇರೆಗಿನ ಯಾವುದೇ ಶೋಧನೆ ಅಥವಾ ಅಭಿಗ್ರಹಣಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಅನ್ವಯವಾಗತಕ್ಕುದು.

**25. ಮಾಹಿತಿಯನ್ನು ಪಡೆಯುವ ಅಧಿಕಾರ** :—ತನಗೆ ವಹಿಸಿದ ಪ್ರಕಾರ್ಯಗಳನ್ನು ಈಡೇರಿಸುವ ಉದ್ದೇಶಗಳಿಗಾಗಿ ರಾಜ್ಯಮಂಡಲಿ ಅಥವಾ ಅದು ಆ ಬಗ್ಗೆ ಶಕ್ತಗೊಳಿಸಿದ ಯಾವನೇ ಅಧಿಕಾರಿಯು, ಅಧಿಭೋಗದಾರ ಅಥವಾ ಯಾವುದೇ ಉದ್ಯಮವನ್ನು ನಡೆಸುತ್ತಿರುವ ಯಾವನೇ ಇತರ ವ್ಯಕ್ತಿಯಿಂದ ಯಾವುದೇ ಮಾಹಿತಿಯನ್ನು (ವಾತಾವರಣಕ್ಕೆ ಹೊರಬಿಟ್ಟ ವಾಯುಮಾಲಿನ್ಯಕಾರಿ ವಸ್ತುಗಳ ಬಗೆಗಳ ಮತ್ತು ಅಂಥ ವಾಯು ಮಾಲಿನ್ಯಕಾರಿ ವಸ್ತುಗಳ ಹೊರಬಿಡುವಿಕೆಯ ಮಟ್ಟದ ಬಗ್ಗೆ ಮಾಹಿತಿಯನ್ನು ಒಳಗೊಂಡು) ಕೋರಬಹುದು ಮತ್ತು ಅಂಥ ಮಾಹಿತಿಯ ಸರಿತನವನ್ನು ಸರಿನೋಡುವ ಉದ್ದೇಶಕ್ಕಾಗಿ, ರಾಜ್ಯ ಮಂಡಲಿ ಅಥವಾ ಅಂಥ ಅಧಿಕಾರಿಯು ಅಂಥ ಉದ್ಯಮ, ನಿಯಂತ್ರಣ ಸಾಧನ ಸಾಮಗ್ರಿ, ಔದ್ಯಮಿಕ ಸ್ಥಾವರವನ್ನು ನಡೆಸಲಾಗುತ್ತಿರುವ ಅಥವಾ ನಿರ್ವಹಿಸಲಾಗುತ್ತಿರುವ ಆವರಣವನ್ನು ಪರಿಶೀಲಿಸಲು ಹಕ್ಕನ್ನು ಹೊಂದಿರತಕ್ಕುದು.

**26. ವಾಯುವಿನ ಅಥವಾ ಹೊರಬಿಡುವಿಕೆಯ ಮಾದರಿಗಳನ್ನು ತೆಗೆದುಕೊಳ್ಳಲು ಅಧಿಕಾರ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಅನುಸರಿಸಬೇಕಾದ ಪ್ರಕ್ರಿಯೆ** :—(1) ರಾಜ್ಯ ಮಂಡಲಿ ಅಥವಾ ಈ ಬಗ್ಗೆ ಅದು ಶಕ್ತಗೊಳಿಸಿದ ಯಾವನೇ ಅಧಿಕಾರಿಯು ವಿಶ್ಲೇಷಣೆಯ ಉದ್ದೇಶಕ್ಕಾಗಿ ಯಾವುದೇ ಹೊಗೆ ಕೊಳವೆ, ಹೊಗೆ ನಳಿಕೆ ಅಥವಾ ನಾಳ ಅಥವಾ ಯಾವುದೇ ಇತರ ಹೊರ ದಾರಿಯಿಂದ ವಾಯು ಅಥವಾ ಹೊರಬಿಡುವಿಕೆಯ ಮಾದರಿಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ತೆಗೆದುಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕುದು.

(2) (1)ನೇ ಉಪ-ಪ್ರಕರಣದ ಮೇರೆಗೆ ತೆಗೆದುಕೊಳ್ಳಲಾದ ಹೊರಬಿಡುವಿಕೆಯ ಮಾದರಿಯ ಯಾವುದೇ ವಿಶ್ಲೇಷಣೆಯ ಫಲಿತಾಂಶವು (3) ಮತ್ತು (4)ನೇ ಉಪ-ಪ್ರಕರಣಗಳ ಉಪಬಂಧಗಳನ್ನು ಪಾಲಿಸಿದ್ದ ಹೊರತು, ಯಾವುದೇ ಕಾನೂನು ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಅಂಗೀಕಾರಾರ್ಹವಾಗತಕ್ಕುದಲ್ಲ.

(3) 4ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, (1)ನೇ ಉಪ-ಪ್ರಕರಣದ ಮೇರೆಗೆ ಹೊರಬಿಡುವಿಕೆಯ ಮಾದರಿಯನ್ನು ವಿಶ್ಲೇಷಣೆಗಾಗಿ ತೆಗೆದುಕೊಂಡಾಗ, ಆ ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿಯು,—

(ಕ) ಅಧಿಭೋಗದಾರ ಅಥವಾ ಅವನ ಏಜೆಂಟನಿಗೆ ಆ ಕೂಡಲೇ ನಿಯಮಿಸಬಹುದಾದಂಥ ನಮೂನೆಯಲ್ಲಿ ಹಾಗೆ ವಿಶ್ಲೇಷಿಸಿಕೊಳ್ಳುವ ಬಗ್ಗೆ ಅವನ ಉದ್ದೇಶದ ನೋಟೀಸನು ಜಾರಿ ಮಾಡತಕ್ಕದು;

(ಖ) ಆ ಅಧಿಭೋಗದಾರ ಅಥವಾ ಅವನ ಏಜೆಂಟನ ಸಮಕ್ಷಮದಲ್ಲಿ ಹೊರಬಿಟ್ಟಿದ್ದರ ಮಾದರಿಯನು ವಿಶ್ಲೇಷಣೆಗಾಗಿ ಸಂಗ್ರಹಿಸತಕ್ಕದು;

(ಗ) ಆ ಮಾದರಿಯನ್ನು ಸಂಪುಟ ಅಥವಾ ಸಂಪುಟಗಳಲ್ಲಿ ಇಡುವಂತೆ ಮಾಡತಕ್ಕದು, ಅವುಗಳಿಗೆ ಗುರುತು ಮತ್ತು ಮೊಹರು ಹಾಕತಕ್ಕದು ಮತ್ತು ಅವುಗಳಿಗೆ ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿ ಮತ್ತು ಅಧಿಭೋಗದಾರ ಅಥವಾ ಅವನ ಏಜೆಂಟ್ ಇವರಿಬ್ಬರೂ ಸಹ ರುಜು ಮಾಡತಕ್ಕದು;

(ಘ) 17ನೇ ಪ್ರಕರಣದ ಮೇರೆಗೆ ರಾಜ್ಯ ಮಂಡಲಿಯು ಸ್ಥಾಪಿಸಿದ ಅಥವಾ ಮನ್ನಣೆ ಮಾಡಿದ ಪ್ರಯೋಗಶಾಲೆಗೆ ಅಥವಾ (ಕ) ಖಂಡದ ಮೇರೆಗೆ ಅವನಿಗೆ ನೋಟೀಸನ್ನು ಜಾರಿ ಮಾಡಿದಾಗ, ಅಥವಾ ಅಧಿಭೋಗದಾರ ಅಥವಾ ಅವನ ಏಜೆಂಟನು ಈ ಬಗ್ಗೆ ಕೋರಿಕೆಯನ್ನು ಮಾಡಿಕೊಂಡರೆ 28ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿಸಿದ ಅಥವಾ ನಿರ್ದಿಷ್ಟಪಡಿಸಿದ ಪ್ರಯೋಗಶಾಲೆಗೆ ಆ ಸಂಪುಟ ಅಥವಾ ಸಂಪುಟಗಳನ್ನು ವಿಳಂಬವಿಲ್ಲದೆ ಕಳುಹಿಸತಕ್ಕದು.

(4) 1ನೇ ಉಪ-ಪ್ರಕರಣದ ಮೇರೆಗೆ ವಿಶ್ಲೇಷಣೆಗಾಗಿ, ಹೊರಬಿಟ್ಟಿದ್ದರ ಮಾದರಿಯನ್ನು ತೆಗೆದುಕೊಂಡಾಗ ಮತ್ತು ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿಯು, (3)ನೇ ಉಪ-ಪ್ರಕರಣದ (ಕ) ಖಂಡದ ಮೇರೆಗೆ ನೋಟೀಸನ್ನು ಅಧಿಭೋಗದಾರ ಅಥವಾ ಅವನ ಏಜೆಂಟನಿಗೆ ಜಾರಿ ಮಾಡಿದಾಗ, ಆ ತರುವಾಯ,—

(ಕ) ಅಧಿಭೋಗದಾರ ಅಥವಾ ಅವನ ಏಜೆಂಟನು ಉದ್ದೇಶಪೂರ್ವಕವಾಗಿ ತಾನಾಗಿಯೇ ಗೈರುಹಾಜರಾದ ಸಂದರ್ಭದಲ್ಲಿ, ಆ ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿಯು, ವಿಶ್ಲೇಷಣೆಗಾಗಿ ಹೊರಬಿಟ್ಟಿದ್ದರ ಮಾದರಿಯನ್ನು ಸಂಪುಟ ಅಥವಾ ಸಂಪುಟಗಳಲ್ಲಿ ಇಡಲು ಸಂಗ್ರಹಿಸತಕ್ಕದು. ಅವುಗಳಿಗೆ ಗುರುತು ಮತ್ತು ಮೊಹರು ಹಾಕತಕ್ಕದು ಹಾಗೂ ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿಯು ರುಜು ಮಾಡತಕ್ಕದು, ಮತ್ತು

(ಖ) ಮಾದರಿಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಅಧಿಭೋಗದಾರ ಅಥವಾ ಅವನ ಏಜೆಂಟನು ಹಾಜರಿದ್ದು, ಆದರೆ (3)ನೇ ಉಪ-ಪ್ರಕರಣದ (ಗ) ಖಂಡದ ಮೇರೆಗೆ ಅಗತ್ಯಪಡಿಸಿದಂತೆ ಹೊರಬಿಟ್ಟಿದ್ದರ ಮಾದರಿಯ ಗುರುತು ಮಾಡಿದ ಮತ್ತು ಮೊಹರು ಮಾಡಿದ ಸಂಪುಟ ಅಥವಾ ಸಂಪುಟಗಳಿಗೆ ರುಜು ಮಾಡಲು ನಿರಾಕರಿಸಿದ ಸಂದರ್ಭದಲ್ಲಿ, ಗುರುತು ಮತ್ತು ಮೊಹರು ಮಾಡಿದ ಸಂಪುಟ ಅಥವಾ ಸಂಪುಟಗಳಿಗೆ ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿಯು ರುಜು ಮಾಡತಕ್ಕದು,

ಮತ್ತು ಆ ಸಂಪುಟ ಅಥವಾ ಸಂಪುಟಗಳನ್ನು, ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿಯು ವಿಳಂಬವಿಲ್ಲದೆ, 28ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿಸಿದ ಅಥವಾ ನಿರ್ದಿಷ್ಟಪಡಿಸಿದ ಪ್ರಯೋಗಶಾಲೆಗೆ ವಿಶ್ಲೇಷಣೆಗಾಗಿ ಕಳುಹಿಸತಕ್ಕದು ಮತ್ತು ಅಂಥ ವ್ಯಕ್ತಿಯು ಅಧಿಭೋಗದಾರ ಅಥವಾ ಅವನ ಏಜೆಂಟನ ಉದ್ದೇಶಪೂರ್ವಕ ಗೈರುಹಾಜರಿ ಬಗ್ಗೆ ಅಥವಾ ಸಂದರ್ಭಾನುಸಾರ, ಸಂಪುಟ ಅಥವಾ ಸಂಪುಟಗಳಿಗೆ ಅವನು ರುಜು ಮಾಡಲು ನಿರಾಕರಿಸಿದ ಬಗ್ಗೆ ಬರಹದಲ್ಲಿ 29ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಸರ್ಕಾರಿ ವಿಶ್ಲೇಷಕನಿಗೆ ತಿಳಿಸತಕ್ಕದು.

**27. 26ನೇ ಪ್ರಕರಣದ ಮೇರೆಗೆ ತೆಗೆದುಕೊಂಡ ಮಾದರಿಗಳ ವಿಶ್ಲೇಷಣೆಯ ಫಲಿತಾಂಶದ ವರದಿಗಳು** :—(1) ರಾಜ್ಯಮಂಡಲಿಯು, ಸ್ಥಾಪಿಸಿದ ಅಥವಾ ಮನ್ನಣೆ ಪಡೆದ ಪ್ರಯೋಗಶಾಲೆಗೆ ಹೊರಬಿಟ್ಟಿದ್ದರ ಮಾದರಿಯನ್ನು ವಿಶ್ಲೇಷಣೆಗಾಗಿ ಕಳುಹಿಸಿರುವಲ್ಲಿ 29ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಮಂಡಲಿ ವಿಶ್ಲೇಷಕನು ಆ ಮಾದರಿಯನ್ನು ವಿಶ್ಲೇಷಿಸತಕ್ಕದು ಮತ್ತು ಅಂಥ ವಿಶ್ಲೇಷಣೆಯ ವರದಿಯನ್ನು ನಿಯಮಿಸಿದ ನಮೂನೆಯಲ್ಲಿ ರಾಜ್ಯ ಮಂಡಲಿಗೆ ತ್ರಿಪ್ರತಿಯಲ್ಲಿ ಒಪ್ಪಿಸತಕ್ಕದು.

(2) (1)ನೇ ಉಪ-ಪ್ರಕರಣದ ಮೇರೆಗೆ ವರದಿಯನ್ನು ಸ್ವೀಕರಿಸಿದ ಮೇಲೆ ಆ ವರದಿಯ ಒಂದು ಪ್ರತಿಯನ್ನು ರಾಜ್ಯ ಮಂಡಲಿಯು ,26ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಭೋಗದಾರ ಅಥವಾ ಅವನ ಏಜೆಂಟನಿಗೆ ಕಳುಹಿಸತಕ್ಕದು, ಇನ್ನೊಂದು ಪ್ರತಿಯನ್ನು ಅವನ ವಿರುದ್ಧ ಯಾವುವೇ ಕಾನೂನು ವ್ಯವಹರಣೆಗಳನ್ನು ತೆಗೆದುಕೊಂಡ ಸಂದರ್ಭದಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸುವುದಕ್ಕಾಗಿ ಪರಿರಕ್ಷಿಸತಕ್ಕದು ಮತ್ತು ಇನ್ನೊಂದು ಪ್ರತಿಯನ್ನು ರಾಜ್ಯ ಮಂಡಲಿಯು ಇಟ್ಟುಕೊಂಡಿರತಕ್ಕದು.

(3) 26ನೇ ಪ್ರಕರಣದ (3)ನೇ ಉಪ-ಪ್ರಕರಣದ (ಘ) ಖಂಡ ಅಥವಾ (4)ನೇ ಉಪ-ಪ್ರಕರಣದ ಮೇರೆಗೆ ವಿಶ್ಲೇಷಣೆಗಾಗಿ ಮಾದರಿಯನ್ನು ಅದರಲ್ಲಿ ನಮೂದಿಸಿದ ಯಾವುದೇ ಪ್ರಯೋಗ ಶಾಲೆಗೆ ಕಳುಹಿಸಿರುವಲ್ಲಿ, ಸದರಿ (4)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಸರ್ಕಾರದ ವಿಶ್ಲೇಷಕನು, ಆ ಮಾದರಿಯನ್ನು ವಿಶ್ಲೇಷಿಸತಕ್ಕದು ಮತ್ತು ವಿಶ್ಲೇಷಣೆಯ ಫಲಿತಾಂಶದ ಬಗ್ಗೆ ವರದಿಯನ್ನು ನಿಯಮಿಸಿದ ನಮೂನೆಯಲ್ಲಿ ತ್ರಿಪ್ರತಿಯಲ್ಲಿ ರಾಜ್ಯ ಮಂಡಲಿಗೆ ಒಪ್ಪಿಸತಕ್ಕದು, ಅದು (2)ನೇ ಉಪ-ಪ್ರಕರಣದ ಉಪಬಂಧಗಳನ್ನು ಪಾಲಿಸತಕ್ಕದು.

(4) 26ನೇ ಪ್ರಕರಣದ (3)ನೇ ಉಪ-ಪ್ರಕರಣದ (ಘ) ಖಂಡದಲ್ಲಿ ಉಪಬಂಧಿಸಿದಂತೆ ಅಧಿಭೋಗದಾರ ಅಥವಾ ಅವನ ಏಜೆಂಟನ ಕೋರಿಕೆಯ ಮೇಲೆ ಅಥವಾ ಅವನು ತಾನಾಗಿಯೇ ಉದ್ದೇಶಪೂರ್ವಕವಾಗಿ ಗೈರುಹಾಜರಾದಾಗ ಅಥವಾ ಆ ಪ್ರಕರಣದ (4)ನೇ ಉಪ-ಪ್ರಕರಣದ ಮೇರೆಗೆ ಹೊರಬಿಟ್ಟಿದ್ದರ ಮಾದರಿಯ ಗುರುತು ಮತ್ತು ಮೊಹರು ಹಾಕಿದ ಸಂಪುಟ ಅಥವಾ ಸಂಪುಟಗಳಿಗೆ ರುಜು ಮಾಡಲು ನಿರಾಕರಿಸಿದಾಗ, ಯಾವುದೇ ಮಾದರಿಯನ್ನು ವಿಶ್ಲೇಷಿಸಲು ವಹಿಸಿದ ಯಾವುದೇ ಖರ್ಚನ್ನು ಅಂಥ ಅಧಿಭೋಗದಾರ ಅಥವಾ ಅವನ ಏಜೆಂಟನು ಸಂದಾಯ ಮಾಡತಕ್ಕದು ಮತ್ತು ತಪ್ಪಿತದ ಸಂದರ್ಭದಲ್ಲಿ ಅದನ್ನು ಭೂ ಕಂದಾಯದ ಬಾಕಿ ಅಥವಾ ಸರ್ಕಾರಿ ತಗಾದೆಯ ಹಾಗೆ ಅವನಿಂದ ವಸೂಲಿ ಮಾಡತಕ್ಕದು.

**28**. ರಾಜ್ಯ ವಾಯು ಪ್ರಯೋಗ ಶಾಲೆ :—(1) ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,—

(ಕ) ಒಂದು ಅಥವಾ ಹೆಚ್ಚು ವಾಯು ಪ್ರಯೋಗ ಶಾಲೆಗಳನ್ನು ಸ್ಥಾಪಿಸಬಹುದು ; ಅಥವಾ

(ಖ) ಈ ಅಧಿನಿಯಮದ ಮೇರೆಗೆ ರಾಜ್ಯ ವಾಯು ಪ್ರಯೋಗ ಶಾಲೆಗೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ರಾಜ್ಯ ವಾಯು ಪ್ರಯೋಗ ಶಾಲೆಗಳೆಂದು ಒಂದು ಅಥವಾ ಹೆಚ್ಚಿನ ಪ್ರಯೋಗ ಶಾಲೆಗಳು ಅಥವಾ ಸಂಸ್ಥೆಗಳನ್ನು ನಿರ್ದಿಷ್ಟಪಡಿಸಬಹುದು.

(2) ರಾಜ್ಯ ಸರ್ಕಾರವು, ರಾಜ್ಯ ಮಂಡಳಿಯೊಂದಿಗೆ ಸಮಾಲೋಚಿಸಿದ ತರುವಾಯ—

(ಕ) ರಾಜ್ಯ ವಾಯು ಪ್ರಯೋಗ ಶಾಲೆಯ ಪ್ರಕಾರ್ಯಗಳು ;

(ಖ) ವಾಯು ಹೊರಬಿಟ್ಟದ್ದರ ಮಾದರಿಗಳನ್ನು ವಿಶ್ಲೇಷಣೆ ಅಥವಾ ಉಪ-ಪರೀಕ್ಷೆಗಳಿಗಾಗಿ ಸದರಿ ಪ್ರಯೋಗ ಶಾಲೆಗೆ ಒಪ್ಪಿಸುವುದಕ್ಕಾಗಿನ ಪ್ರಕ್ರಿಯೆ, ಅದರ ಮೇಲೆ ಪ್ರಯೋಗ ಶಾಲೆಯ ವರದಿಯ ನಮೂನೆ ಮತ್ತು ಅಂಥ ವರದಿಯ ಬಗ್ಗೆ ಸಂದಾಯ ಮಾಡಬೇಕಾದ ಫೀಜು ;

(ಗ) ಆ ಪ್ರಯೋಗ ಶಾಲೆಯು, ಅದರ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ ಮಾಡಲು ಅವಶ್ಯಕ ಅಥವಾ ವಿಹಿತವಾಗಬಹುದಾದಂಥ ಇತರ ವಿಷಯಗಳು

—ಇವುಗಳನ್ನು ನಿಯಮಿಸಿ ನಿಯಮಗಳನ್ನು ರಚಿಸಬಹುದು.

**29**. ವಿಶ್ಲೇಷಕರು.—ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ, 28ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿತವಾದ ಅಥವಾ ನಿರ್ದಿಷ್ಟಪಡಿಸಿದ ಯಾವುದೇ ಪ್ರಯೋಗ ಶಾಲೆಗೆ ವಿಶ್ಲೇಷಣೆಗಾಗಿ ಕಳುಹಿಸಿದ ವಾಯು ಅಥವಾ ಹೊರಬಿಟ್ಟದ್ದರ ಮಾದರಿಗಳನ್ನು ವಿಶ್ಲೇಷಣೆ ಮಾಡುವ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಯೋಚಿಸುವಂಥ ಮತ್ತು ನಿಯಮಿಸಿದ ಅರ್ಹತೆಗಳನ್ನು ಹೊಂದಿರುವಂಥ ವ್ಯಕ್ತಿಗಳನ್ನು ಸರ್ಕಾರಿ ವಿಶ್ಲೇಷಕರನ್ನಾಗಿ ನೇಮಕ ಮಾಡಬಹುದು.

(2) 14ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ರಾಜ್ಯ ಮಂಡಲಿಯು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ, 17ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಅಥವಾ ಮನ್ನಣೆ ಪಡೆದ ಯಾವುದೇ ಪ್ರಯೋಗ ಶಾಲೆಗೆ ವಿಶ್ಲೇಷಣೆಗಾಗಿ ಕಳುಹಿಸಿದ ವಾಯು ಅಥವಾ ಹೊರಬಿಟ್ಟದ್ದರ ಮಾದರಿಗಳನ್ನು ವಿಶ್ಲೇಷಿಸುವ ಉದ್ದೇಶಕ್ಕಾಗಿ, ಅದು ಸೂಕ್ತವೆಂದು ಯೋಚಿಸುವಂಥ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳನ್ನು ಮಂಡಲಿಯ ವಿಶ್ಲೇಷಕರನ್ನಾಗಿ ನೇಮಕ ಮಾಡಬಹುದು.

**30**. ವಿಶ್ಲೇಷಕರ ವರದಿಗಳು :— ಸರ್ಕಾರಿ ವಿಶ್ಲೇಷಕ ಅಥವಾ ಸಂದರ್ಭಾನುಸಾರ, ರಾಜ್ಯ ಮಂಡಲಿಯ ವಿಶ್ಲೇಷಕನು ರುಜು ಮಾಡಿದ ವರದಿಯೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು, ಅದರಲ್ಲಿ ನಿರೂಪಿಸಿದ ಸಂಗತಿಗಳ ಸಾಕ್ಷ್ಯವಾಗಿ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ಉಪಯೋಗಿಸಬಹುದು.

**31**. ಅಪೀಲುಗಳು :—(1) ಈ ಅಧಿನಿಯಮದ ಮೇರೆಗೆ, ರಾಜ್ಯ ಮಂಡಲಿಯು ಮಾಡಿರುವ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅವನಿಗೆ ಆದೇಶವನ್ನು ತಿಳಿಸಿದಂಥ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ರಾಜ್ಯ ಸರ್ಕಾರವು ರಚಿಸಲು ಯೋಗ್ಯವೆಂದು ಯೋಚಿಸಬಹುದಾದಂಥ ಪ್ರಾಧಿಕಾರಕ್ಕೆ (ಇಲ್ಲಿ ಇನ್ನು ಮುಂದೆ ಅಪೀಲು ಪ್ರಾಧಿಕಾರ ವೆಂದು ಉಲ್ಲೇಖಿಸಲಾಗಿದೆ) ಅಪೀಲನ್ನು ಹೂಡಬಹುದು :

ಪರಂತು, ಅಪೀಲು ಪ್ರಾಧಿಕಾರಕ್ಕೆ, ಸಾಕಷ್ಟು ಕಾರಣದಿಂದ ಅಪೀಲುದಾರನಿಗೆ ಅಪೀಲನ್ನು ದಾಖಲುಮಾಡಲು ಅಡ್ಡಿಯುಂಟಾಗಿದ್ದಿತೆಂದು ಮನದಟ್ಟಾದರೆ, ಸದರಿ ಮೂವತ್ತು ದಿವಸಗಳ ಅವಧಿಯು ಮುಕ್ತಾಯವಾದ ತರುವಾಯ, ಅಪೀಲನ್ನು ಪುರಸ್ಕರಿಸಬಹುದು.

(2) ಅಪೀಲು ಪ್ರಾಧಿಕಾರವು, ರಾಜ್ಯ ಸರ್ಕಾರವು ಯೋಗ್ಯವೆಂದು ಭಾವಿಸಬಹುದಾದಂತೆ ರಾಜ್ಯ ಸರ್ಕಾರವು ನೇಮಕ ಮಾಡಬೇಕಾದ ಒಬ್ಬ ವ್ಯಕ್ತಿ ಅಥವಾ ಮೂವರು ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು.

(3) (1)ನೇ ಉಪ-ಪ್ರಕರಣದ ಮೇರೆಗೆ ಅಪೀಲನ್ನು ಹೂಡಬಹುದಾದಂಥ ನಮೂನೆ ಮತ್ತು ರೀತಿ, ಅಂಥ ಅಪೀಲಿಗಾಗಿ ಸಂದಾಯ ಮಾಡಬೇಕಾದ ಫೀಜು ಮತ್ತು ಅಪೀಲು ಪ್ರಾಧಿಕಾರವು ಅನುಸರಿಸಬೇಕಾದ ಪ್ರಕ್ರಿಯೆಯು, ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

(4) (1)ನೇ ಉಪ-ಪ್ರಕರಣದ ಮೇರೆಗೆ ಹೂಡಿದ ಅಪೀಲನ್ನು ಸ್ವೀಕರಿಸಿದ ನಂತರ, ಅಪೀಲು ಪ್ರಾಧಿಕಾರವು, ಅಪೀಲುದಾರ ಮತ್ತು ರಾಜ್ಯ ಮಂಡಲಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ನಂತರ, ಅಪೀಲನ್ನು ಸಾಧ್ಯವಾದಷ್ಟು ಬೇಗನೆ ವಿಲೆ ಮಾಡತಕ್ಕದ್ದು.

## ಅಧ್ಯಾಯ—V

## ನಿಧಿಗಳು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**32. ಕೇಂದ್ರ ಸರ್ಕಾರದಿಂದ ವಂತಿಗೆಗಳು** :—ಕೇಂದ್ರ ಸರ್ಕಾರವು ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತು ಮಾಡಿದ ಯುಕ್ತ ವಿನಿಯೋಗದ ತರುವಾಯ ಪ್ರತಿ ಹಣಕಾಸು ವರ್ಷದಲ್ಲಿ, ಈ ಅಧಿನಿಯಮದ ಮೇರೆಗೆ, ಅವುಗಳ ಪ್ರಕಾರ್ಯಗಳನ್ನು ನಿರ್ವಹಿಸಲು ಮಂಡಲಿಯನ್ನು ಶಕ್ತಗೊಳಿಸಲು ಅದು ಅವಶ್ಯವೆಂದು ಯೋಚಿಸಬಹುದಾದಂಥ ವಂತಿಗೆಗಳನ್ನು ರಾಜ್ಯ ಮಂಡಲಿಗೆ ಕೊಡಬಹುದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974ರ (1974ರ 6) 4ನೇ ಪ್ರಕರಣದ ಮೇರೆಗೆ ರಚಿತವಾದ ಮತ್ತು ಆ ಅಧಿನಿಯಮದ ಮೂಲಕ ಅದರ ಮೇರೆಗಿನ ತನ್ನ ನಿಧಿಯಿಂದ ಹಣವನ್ನು ವೆಚ್ಚ ಮಾಡಲು ಮತ್ತು ವಾಯು ಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನ ಗೊಳಿಸುವುದಕ್ಕೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅದರ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿಯೂ ಸಹ ಶಕ್ತಗೊಳಿಸಲಾದಂಥ ರಾಜ್ಯ ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಮಂಡಲಿಗೆ ಅನ್ವಯಿಸತಕ್ಕುದಲ್ಲ.

**33. ಮಂಡಲಿಯ ನಿಧಿ**:— (1) ಪ್ರತಿಯೊಂದು ರಾಜ್ಯ ಮಂಡಲಿಯು, ಈ ಅಧಿನಿಯಮದ ಉದ್ದೇಶಗಳಿಗಾಗಿ ತನ್ನದೇ ಆದ ನಿಧಿಯನ್ನು ಹೊಂದಿರತಕ್ಕುದು, ಮತ್ತು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅದಕ್ಕೆ ಸಂದಾಯ ಮಾಡಬಹುದಾದಂಥ ಎಲ್ಲಾ ಮೊತ್ತಗಳನ್ನು ಮತ್ತು ಆ ಮಂಡಲಿಯು (ರಾಜ್ಯ ಸರ್ಕಾರದಿಂದ ವಂತಿಗೆಗಳು ಯಾವುವಾದರೂ ಇದ್ದರೆ ಅವುಗಳ ರೂಪದಲ್ಲಿ ಬರುವ ಫೀಜುಗಳು, ದಾನಗಳು, ಅನುದಾನಗಳು, ದೇಣಿಗೆಗಳು, ಉಪಕಾರ ಧನಗಳು ಇವುಗಳ ರೂಪದಲ್ಲಿ ಅಥವಾ ಅನ್ಯಥಾ ಬರುವ) ಎಲ್ಲಾ ಇತರ ಸ್ವೀಕೃತಿಗಳನ್ನು ಮಂಡಲಿಯ ನಿಧಿಗೆ ಜಮೆ ಕಟ್ಟತಕ್ಕುದು ಮತ್ತು ಮಂಡಲಿಯ ಎಲ್ಲಾ ಸಂದಾಯಗಳನ್ನು ಅದರಿಂದ ಮಾಡತಕ್ಕುದು.

(2) ಪ್ರತಿಯೊಂದು ರಾಜ್ಯ ಮಂಡಲಿಯು ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನೆರವೇರಿಸು-ವುದಕ್ಕಾಗಿ, ಅದು ಸೂಕ್ತವೆಂದು ಯೋಚಿಸುವಂಥ ಮೊತ್ತಗಳನ್ನು ವೆಚ್ಚ ಮಾಡಬಹುದು ಮತ್ತು ಅಂಥ ಮೊತ್ತಗಳನ್ನು, ಆ ಮಂಡಲಿಯ ನಿಧಿಯಿಂದ ಸಂದಾಯ ಮಾಡಬೇಕಾದ ವೆಚ್ಚವೆಂಬುದಾಗಿ ಪರಿಗಣಿಸತಕ್ಕುದು.

(3) ಈ ಪ್ರಕರಣದಲ್ಲಿರುವುದಾವುದೂ, ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974ರ (1974ರ 6) 4ನೇ ಪ್ರಕರಣದ ಮೇರೆಗೆ ರಚಿತವಾದ ಮತ್ತು ಆ ಅಧಿನಿಯಮದ ಮೂಲಕ ಅದರ ಮೇರೆಗಿನ ತನ್ನ ಹಣವನ್ನು ವೆಚ್ಚ ಮಾಡಲು ಮತ್ತು ವಾಯು ಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಗೊಳಿಸುವುದಕ್ಕೆ ಸಂಬಂಧ ಪಟ್ಟಂತೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅದರ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿಯೂ ಶಕ್ತಗೊಳಿಸಲಾದಂಥ ರಾಜ್ಯ ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಮಂಡಲಿಗೆ ಅನ್ವಯಿಸತಕ್ಕುದಲ್ಲ.

**34. ಬಜೆಟ್**:—ಕೇಂದ್ರ ಮಂಡಲಿ ಅಥವಾ ಸಂದರ್ಭಾನುಸಾರ ರಾಜ್ಯ ಮಂಡಲಿಯು ಪ್ರತಿ ಹಣಕಾಸು ವರ್ಷ-ದಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಮುಂಬರುವ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಅಂದಾಜು ಸ್ವೀಕೃತಿ ಮತ್ತು ವೆಚ್ಚವನ್ನು ತೋರಿಸುವ ಬಜೆಟ್ಟನ್ನು ತಯಾರಿಸತಕ್ಕುದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ, ರಾಜ್ಯಸರ್ಕಾರಕ್ಕೆ ಕಳುಹಿಸತಕ್ಕುದು.

**35. ವಾರ್ಷಿಕ ವರದಿ**:– (1) ಕೇಂದ್ರ ಮಂಡಲಿಯು ಪ್ರತಿ ಹಣಕಾಸು ವರ್ಷದಲ್ಲಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿನ ಅದರ ಚಟುವಟಿಕೆಗಳ ಪೂರ್ಣವಾದ ವರದಿಯನ್ನು ಕೊಡುವ ವಾರ್ಷಿಕ ವರದಿಯನ್ನು ತಯಾರಿಸತಕ್ಕುದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸ ಸತಕ್ಕುದು ಮತ್ತು ಆ ಸರ್ಕಾರವು, ಅಂಥ ಪ್ರತಿಯೊಂದು ವರದಿಯನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳುಗಳೊಳಗಾಗಿ ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸುವಂತೆ ಮಾಡತಕ್ಕುದು.

(2) ಪ್ರತಿಯೊಂದು ರಾಜ್ಯ ಮಂಡಲಿಯು, ಪ್ರತಿ ಹಣಕಾಸು ವರ್ಷದಲ್ಲಿ, ನಿಯಮಿಸಬಹುದಾದಂಥ ನಮೂನೆ ಮತ್ತು ಅಂಥ ಕಾಲದಲ್ಲಿ ಈ ಅಧಿನಿಯಮದ ಮೇರೆಗೆ ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿನ ಅದರ ಚಟುವಟಿಕೆಗಳ ಪೂರ್ಣ ವಾದ ವರದಿಯನ್ನು ಕೊಡುವ ವಾರ್ಷಿಕ ವರದಿಯನ್ನು ತಯಾರಿಸತಕ್ಕುದು ಮತ್ತು ಅದರ ಪ್ರತಿಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಆ ಸರ್ಕಾರವು ಅಂಥ ಪ್ರತಿಯೊಂದು ವರದಿಯನ್ನು ಅದನ್ನು ಸ್ವೀಕರಿಸಿದ ದಿನಾಂಕದಿಂದ ಒಂಬತ್ತು ತಿಂಗಳುಗಳೊಳಗೆ ರಾಜ್ಯ ವಿಧಾನ ಮಂಡಲದ ಮುಂದೆ ಇಡುವಂತೆ ಮಾಡತಕ್ಕುದು.

**36. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ**.— (1) ಪ್ರತಿಯೊಂದು ಮಂಡಲಿಯು, ಈ ಅಧಿನಿಯಮದ ಮೇರೆಗಿನ ಅದರ ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ, ಸರಿಯಾದ ಲೆಕ್ಕಪತ್ರಗಳು ಮತ್ತು ಇತರ ಸುಸಂಗತ ದಾಖಲೆಗಳನ್ನು ಇಡತಕ್ಕುದು ಮತ್ತು ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ, ರಾಜ್ಯಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಪತ್ರವನ್ನು ತಯಾರಿಸತಕ್ಕುದು.

(2) ಮಂಡಲಿಯ ಲೆಕ್ಕಪತ್ರಗಳನ್ನು, ಕಂಪನಿಗಳ ಅಧಿನಿಯಮ, 1956ರ (1956ರ 1) 226ನೇ ಪ್ರಕರಣದ ಮೇರೆಗೆ ಕಂಪನಿಗಳ ಲೆಕ್ಕ ಪರಿಶೋಧಕನಾಗಿ ಕಾರ್ಯನಿರ್ವಹಿಸಲು ಕ್ರಮಬದ್ಧವಾಗಿ ಅರ್ಹನಾಗಿರುವ ಲೆಕ್ಕಪರಿಶೋಧಕನು ಲೆಕ್ಕಪರಿಶೋಧನೆ ಮಾಡತಕ್ಕುದು.

(3) ಸದರಿ ಲೆಕ್ಕ ಪರಿಶೋಧಕನನ್ನು, ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ನ ಸಲಹೆ ಮೇಲೆ ಸಂದರ್ಭಾನುಸಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ನೇಮಕ ಮಾಡತಕ್ಕುದು.

(4) ಈ ಅಧಿನಿಯಮದ ಮೇರೆಗೆ ಮಂಡಲಿಯ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಲು ನೇಮಕಗೊಂಡಿರುವ ಪ್ರತಿಯೊಬ್ಬ ಲೆಕ್ಕಪರಿಶೋಧಕನು, ಅದರ ಪುಸ್ತಕಗಳು, ಲೆಕ್ಕಪತ್ರಗಳು, ಸಂಬಂಧಪಟ್ಟ ವೋಚರುಗಳು ಮತ್ತು ಇತರ ದಸ್ತಾವೇಜುಗಳು ಮತ್ತು ಕಾಗದಪತ್ರಗಳನ್ನು ಹಾಜರುಪಡಿಸುವಂತೆ ತಗಾದೆ ಮಾಡಲು ಮತ್ತು ಮಂಡಲಿಯ ಯಾವುದೇ ಕಚೇರಿಯನ್ನು ಪರಿಶೀಲಿಸಲು ಹಕ್ಕನ್ನು ಹೊಂದಿರತಕ್ಕದ್ದು.

(5) ಅಂಥ ಪ್ರತಿಯೊಬ್ಬ ಲೆಕ್ಕಪರಿಶೋಧಕನು ಲೆಕ್ಕ ಪತ್ರಗಳ ಪರಿಶೋಧಿತ ಪ್ರತಿಯ ಜೊತೆಯಲ್ಲಿ ಅವನ ವರದಿಯ ಪ್ರತಿಯನ್ನು ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(6) ಕೇಂದ್ರ ಸರ್ಕಾರವು (5)ನೇ ಉಪ-ಪ್ರಕರಣದ ಮೇರೆಗೆ ಲೆಕ್ಕಪರಿಶೋಧನೆಯ ವರದಿಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ ಅದನ್ನು ಸಂಸತ್ತಿನ ಉಭಯಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

(7) ರಾಜ್ಯ ಸರ್ಕಾರವು (5)ನೇ ಉಪ-ಪ್ರಕರಣದ ಮೇರೆಗೆ, ಲೆಕ್ಕಪರಿಶೋಧನೆ ವರದಿಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ ಅದನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

## ಅಧ್ಯಾಯ - VI

### ದಂಡಗಳು ಮತ್ತು ಪ್ರಕ್ರಿಯೆ

**37. 21 (5)ನೇ ಪ್ರಕರಣ ಅಥವಾ 22ನೇ ಪ್ರಕರಣದ ಉಪಬಂಧಗಳನ್ನು ಅಥವಾ ಈ ಅಧಿನಿಯಮದ ಮೇರೆಗೆ ಹೊರಡಿಸಿರುವ ಆದೇಶಗಳು ಅಥವಾ ನಿರ್ದೇಶನಗಳನ್ನು ಪಾಲಿಸಲು ತಪ್ಪುವುದು:**-(1) 21ನೇ ಪ್ರಕರಣದ (5)ನೇ ಉಪ-ಪ್ರಕರಣದ ಅಥವಾ 22ನೇ ಪ್ರಕರಣದ ಉಪಬಂಧಗಳು ಅಥವಾ ಈ ಅಧಿನಿಯಮದ ಮೇರೆಗೆ ಕೊಟ್ಟ ಆದೇಶ ಅಥವಾ ನಿರ್ದೇಶನವನ್ನು ಪಾಲಿಸಲು ತಪ್ಪುವ ಯಾರೇ ಆಗಲಿ, ಅಂಥ ಪ್ರತಿಯೊಂದು ತಪ್ಪುವಿಕೆಗೆ ಸಂಬಂಧಪಟ್ಟಂತೆ, ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯರಾಗತಕ್ಕದ್ದು ಮತ್ತು ತಪ್ಪುವಿಕೆಯು ಮುಂದುವರಿದ ಸಂದರ್ಭದಲ್ಲಿ, ಮೊದಲ ಅಂಥ ತಪ್ಪುವಿಕೆಗಾಗಿ ಅಪರಾಧ ನಿರ್ಣಯವಾದ ಮೇಲೆ ಅಂಥ ತಪ್ಪುವಿಕೆಯು ಮುಂದುವರಿಯುವಂಥ ಅವಧಿಯಲ್ಲಿ ಪ್ರತಿ ದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯರಾಗತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ತಪ್ಪುವಿಕೆಯು, ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಒಂದು ವರ್ಷದ ಅವಧಿಗಿಂತ ಹೆಚ್ಚಿಗೆ ಮುಂದುವರಿದರೆ, ಅಪರಾಧಿಯು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

**38. ಕೆಲವು ಕಾರ್ಯಗಳಿಗಾಗಿ ದಂಡಗಳು:**—(ಕ) ಮಂಡಲಿಯ ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ, ನೆಲದಲ್ಲಿ ನೆಲೆಗೊಳಿಸಿದ ಯಾವುದೇ ಸ್ತಂಭ, ಕಂಬ ಅಥವಾ ಗೂಟವನ್ನು ಅಥವಾ ಹಾಕಿದ, ಲೇಖಿಸಿದ ಅಥವಾ ಇಟ್ಟ ಯಾವುದೇ ನೋಟೀಸು ಅಥವಾ ಇತರ ವಸ್ತುವನ್ನು ನಾಶಪಡಿಸುವ, ಕೆಡವಿ ಹಾಕುವ, ತೆಗೆದುಹಾಕುವ, ಕ್ಷತಿಗೊಳಿಸುವ ಅಥವಾ ವಿರೂಪಗೊಳಿಸುವ; ಅಥವಾ

(ಖ) ಮಂಡಲಿಯ ಆದೇಶಗಳ ಅಥವಾ ನಿರ್ದೇಶನಗಳ ಮೇರೆಗೆ ಕೆಲಸ ಮಾಡುವ ಯಾವನೇ ವ್ಯಕ್ತಿಗೆ ಈ ಅಧಿನಿಯಮದ ಮೇರೆಗೆ ಅವನ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಮತ್ತು ಕರ್ತವ್ಯಗಳನ್ನು ನೆರವೇರಿಸುವುದಕ್ಕೆ ಅಡ್ಡಿಯನ್ನುಂಟು ಮಾಡುವ; ಅಥವಾ

(ಗ) ಮಂಡಲಿಗೆ ಸೇರಿದ ಯಾವುದೇ ಕಾಮಗಾರಿಗಳನ್ನು ಅಥವಾ ಸ್ವತ್ತನ್ನು ನಷ್ಟಗೊಳಿಸುವ; ಅಥವಾ

(ಘ) ಈ ಅಧಿನಿಯಮದ ಉದ್ದೇಶಕ್ಕಾಗಿ ಮಂಡಲಿ ಅಥವಾ ಯಾವನೇ ಅಧಿಕಾರಿ ಅಥವಾ ಇತರ ನಿಯೋಜಿತನಿಗೆ ಅಗತ್ಯವಿರುವ ಯಾವುದೇ ಮಾಹಿತಿಯನ್ನು ಮಂಡಲಿಗೆ ಅಥವಾ ಅಂಥ ಅಧಿಕಾರಿಗೆ ಅಥವಾ ಇತರ ನಿಯೋಜಿತನಿಗೆ ಒದಗಿಸಲು ತಪ್ಪುವ; ಅಥವಾ

(ಙ) ರಾಜ್ಯ ಮಂಡಲಿಯು ವಿಧಿಸಿದ ಮಾನಕಗಳಿಗಿಂತ ಹೆಚ್ಚಾಗಿ ವಾತಾವರಣದಲ್ಲಿ ವಾಯು ಮಾಲಿನ್ಯಕಾರಿ ವಸ್ತುಗಳ ಹೊರಬಿಡುವಿಕೆಯು ಸಂಭವಿಸುವುದನ್ನು, ಅಥವಾ ಅಂಥ ಸಂಭವಿಸುವಿಕೆಯ ಶಂಕೆಯನ್ನು 23ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ರಾಜ್ಯ ಮಂಡಲಿ ಮತ್ತು ನಿಯಮಿಸಿದ ಇತರ ಪ್ರಾಧಿಕಾರಗಳು ಅಥವಾ ಏಜೆನ್ಸಿಗಳಿಗೆ ತಿಳಿಸಲು ತಪ್ಪುವ; ಅಥವಾ

(ಚ) ಈ ಅಧಿನಿಯಮದ ಮೇರೆಗೆ ಕೊಡಲು ಅವನನ್ನು ಅಗತ್ಯಪಡಿಸಿದಂಥ ಯಾವುದೇ ಮಾಹಿತಿಯನ್ನು ಕೊಡುವಲ್ಲಿ, ಯಾವುದೇ ಮುಖ್ಯ ವಿವರದಲ್ಲಿ ಸುಳ್ಳಾಗಿರುವ ಹೇಳಿಕೆಯನ್ನು ಕೊಡುವ; ಅಥವಾ

(ಛ) 21ನೇ ಪ್ರಕರಣದ ಮೇರೆಗೆ ಯಾವುದೇ ಸಮ್ಮತಿಯನ್ನು ಪಡೆಯುವ ಉದ್ದೇಶಕ್ಕಾಗಿ ಯಾವುದೇ ಮುಖ್ಯ ವಿವರದಲ್ಲಿ ಸುಳ್ಳಾಗಿರುವ ಹೇಳಿಕೆಯನ್ನು ಕೊಡುವ—

—ಯಾರೇ ಆಗಲಿ ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯರಾಗತಕ್ಕದ್ದು.

**39. ಅಧಿನಿಯಮದ ಕೆಲವು ಉಪಬಂಧಗಳ ಉಲ್ಲಂಘನೆಗಾಗಿ ದಂಡ:**—ಈ ಅಧಿನಿಯಮದಲ್ಲಿ ಎಲ್ಲಿಯೋ ಆಗಲಿ ದಂಡವನ್ನು ಉಪಬಂಧಿಸಿರದಂಥ, ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ಆಗಲಿ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ, ಮತ್ತು ಉಲ್ಲಂಘನೆಯು ಮುಂದುವರಿಯುತ್ತಿರುವ ಸಂದರ್ಭದಲ್ಲಿ, ಅಂಥ ಮೊದಲ ಉಲ್ಲಂಘನೆಗೆ ಅಪರಾಧ ನಿರ್ಣಯವಾದ ಮೇಲೆ ಅಂಥ ಉಲ್ಲಂಘನೆಯು ಮುಂದುವರೆಯುವಂಥ ಅವಧಿಯಲ್ಲಿ ಪ್ರತಿ ದಿವಸಕ್ಕೆ ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**40. ಕಂಪನಿಗಳಿಂದ ಅಪರಾಧಗಳು:**—(1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವರು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿ ಇರುವುದು ಯಾವುದೂ, ಯಾವನೇ ಅಂಥ ವ್ಯಕ್ತಿಯು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ಪ್ರತಿಬಂಧಿಸಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಅವನನ್ನು, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪೆನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪೆನಿಯ ಯಾವನೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅತನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ :**—ಈ ಪ್ರಕರಣದ ಉದ್ದೇಶಗಳಿಗಾಗಿ,—

(ಕ) "ಕಂಪೆನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ ; ಮತ್ತು

(ಖ) ಫರ್ಮಿಗೆ ಸಂಬಂಧಿಸಿ 'ನಿರ್ದೇಶಕ' ಎಂದರೆ ಫರ್ಮಿನಲ್ಲಿನ ಪಾಲುದಾರ.

**41. ಸರ್ಕಾರಿ ಇಲಾಖೆಗಳಿಂದ ಅಪರಾಧಗಳು :**—ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಸರ್ಕಾರದ ಯಾವುದೇ ಇಲಾಖೆಯು ಮಾಡಿರುವಲ್ಲಿ, ಇಲಾಖಾ ಮುಖ್ಯಾಧಿಕಾರಿಯನ್ನು ಆ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಅಡಕಗೊಂಡಿರುವುದು ಯಾವುದೂ, ಅಂಥ ಇಲಾಖಾ ಮುಖ್ಯಾಧಿಕಾರಿಯು ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ಪ್ರತಿಬಂಧಿಸಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಸರ್ಕಾರಿ ಇಲಾಖೆಯು ಮಾಡಿರುವಲ್ಲಿ ಮತ್ತು ಇಲಾಖಾ ಮುಖ್ಯಾಧಿಕಾರಿಯನ್ನು ಹೊರತುಪಡಿಸಿ ಯಾವನೇ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆ ಎಂದು ರುಜುವಾತಾದರೆ ಅಥವಾ ಅವನ ಯಾವುದೇ ನಿರ್ಲಕ್ಷ್ಯತೆ ಕಾರಣದಿಂದ ಎಂದು ಆರೋಪಿಸಬಹುದಾದರೆ, ಅಂಥ ಅಧಿಕಾರಿಯನ್ನು ಸಹ, ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**42. ಸದ್ಭಾವನೆಯಿಂದ ಕೈಕೊಂಡ ಕ್ರಮದ ಬಗ್ಗೆ ಸಂರಕ್ಷಣೆ :**—ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ಕಾರ ಅಥವಾ ಸರ್ಕಾರದ ಯಾವನೇ ಅಧಿಕಾರಿ ಅಥವಾ ಮಂಡಲಿಯ ಯಾವನೇ ಸದಸ್ಯ ಅಥವಾ ಯಾವನೇ ಅಧಿಕಾರಿ ಅಥವಾ ಇತರ ನಿಯೋಜಿತನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**43. ಅಪರಾಧಗಳ ಸಂಜ್ಞಾನ:**—ಈ ಅಧಿನಿಯಮದ ಮೇರೆಗಿನ ಅಪರಾಧದ ಬಗ್ಗೆ ಸಂಜ್ಞಾನವನ್ನು ರಾಜ್ಯ ಮಂಡಲಿಯು ಮಾಡಿದ ದೂರಿನ ಮೇಲೆ ಅಥವಾ ಅದರ ಬರಹದಲ್ಲಿನ ಪೂರ್ವಮಂಜೂರಾತಿಯಿಂದಲ್ಲದೆ ಯಾವುದೇ ನ್ಯಾಯಾಲಯವು ಕೈಕೊಳ್ಳತಕ್ಕದ್ದಲ್ಲ ಮತ್ತು ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟನ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನ ದರ್ಜೆಗಿಂತ ಕಡಿಮೆ ಇಲ್ಲದ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆ ಮಾಡತಕ್ಕದ್ದಲ್ಲ.

**44. ಮಂಡಲಿಯ ಸದಸ್ಯರು, ಅಧಿಕಾರಿಗಳು ಮತ್ತು ನಿಯೋಜಿತರು ಲೋಕ ನೌಕರರಾಗಿರತಕ್ಕದ್ದು:**—ಮಂಡಲಿಯ ಎಲ್ಲಾ ಸದಸ್ಯರು ಮತ್ತು ಎಲ್ಲಾ ಅಧಿಕಾರಿಗಳು ಮತ್ತು ಇತರ ನಿಯೋಜಿತರನ್ನು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಯಾವುದೇ ಉಪಬಂಧದ ಅನುಸರಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವುದಾಗಿ ತಾತ್ಪರ್ಯವಾಗುವಾಗ ಅವರನ್ನು ಭಾರತದ ದಂಡ ಸಂಹಿತೆ (1860ರ 45)ಯ, 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂಬುದಾಗಿ ಭಾವಿಸತಕ್ಕದ್ದು.

**45.** ವರದಿಗಳು ಮತ್ತು ವಿವರಪಟ್ಟಿಗಳು:—ಕೇಂದ್ರ ಮಂಡಲಿಯು, ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರಕ್ಕೆ ಆ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವರದಿಗಳು, ವಿವರ ಪಟ್ಟಿಕೆಗಳು, ಅಂಕಿ ಅಂಶಗಳು, ಲೆಕ್ಕಪತ್ರಗಳು ಮತ್ತು ಇತರ ಮಾಹಿತಿಯನ್ನು ಒದಗಿಸತಕ್ಕದು ಮತ್ತು ರಾಜ್ಯ ಮಂಡಲಿಯು ಈ ಅಧಿನಿಯಮದ ಮೇರೆಗಿನ ಅದರ ಪ್ರಕಾರ್ಯಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರಕ್ಕೆ ಮತ್ತು ಕೇಂದ್ರ ಮಂಡಲಿಗೆ ಸಂದರ್ಭಾನುಸಾರ, ಆ ಸರ್ಕಾರ ಅಥವಾ ಕೇಂದ್ರ ಮಂಡಲಿಯು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವರದಿಗಳು, ವಿವರ ಪಟ್ಟಿಕೆಗಳು, ಅಂಕಿ ಅಂಶಗಳು, ಲೆಕ್ಕಪತ್ರಗಳು ಮತ್ತು ಇತರ ಮಾಹಿತಿಯನ್ನು ಒದಗಿಸತಕ್ಕದು.

**46.** ಅಧಿಕಾರ ವ್ಯಾಪ್ತಿಯ ಪ್ರತಿಷೇಧ:—ಯಾವುದೇ ಸಿವಿಲ್ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ರಚಿಸಿದ ಅಪೀಲು ಪ್ರಾಧಿಕಾರವನ್ನು, ಯಾವ ವಿಷಯಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿರ್ಧರಿಸಲು ಶಕ್ತಗೊಳಿಸಲಾಗಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ದಾವೆ ಅಥವಾ ವ್ಯವಹರಣೆಯನ್ನು ಪುರಸ್ಕರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದಾನ ಮಾಡಿದ ಯಾವುದೇ ಅಧಿಕಾರಕ್ಕೆ ಅನುಸಾರವಾಗಿ ಕೈಗೊಂಡ ಅಥವಾ ಕೈಕೊಳ್ಳಬೇಕಾದ ಯಾವುದೇ ಕ್ರಮಕ್ಕೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು ಯಾವುದೇ ನಿರ್ಬಂಧಕಾಜ್ಞೆಯನ್ನು ಕೊಡತಕ್ಕದಲ್ಲ.

## ಅಧ್ಯಾಯ-VII

### ಸಂಕೀರ್ಣ

**47. ರಾಜ್ಯಮಂಡಲಿಯನ್ನು ರದ್ದುಪಡಿಸಲು ರಾಜ್ಯ ಸರ್ಕಾರದ ಅಧಿಕಾರ:**—(1) ಯಾವುದೇ ಕಾಲದಲ್ಲಿ, ರಾಜ್ಯ ಸರ್ಕಾರವು,—

(ಕ) ಈ ಅಧಿನಿಯಮದ ಮೇರೆಗೆ ರಚಿತವಾದ ರಾಜ್ಯ ಮಂಡಲಿಯು, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅದಕ್ಕೆ ವಹಿಸಿದ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಸತತವಾಗಿ ತಪ್ಪಿದೆಯೆಂದು; ಅಥವಾ

(ಖ) ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಅವಶ್ಯವೆನಿಸುವಂಥ ಸನ್ನಿವೇಶಗಳು ಅಸ್ತಿತ್ವದಲ್ಲಿರುವುವೆಂದು ಅಭಿಪ್ರಾಯ ಪಟ್ಟರೆ

—ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಆರು ತಿಂಗಳುಗಳಿಗೆ ಮೀರದಂಥ ಅವಧಿಯವರೆಗೆ ರಾಜ್ಯಮಂಡಲಿಯನ್ನು ರದ್ದುಪಡಿಸಬಹುದು:

ಪರಂತು, (ಕ) ಖಂಡದಲ್ಲಿ ನಮೂದಿಸಿದ ಕಾರಣಗಳಿಗಾಗಿ ಈ ಉಪ-ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮೊದಲು, ರಾಜ್ಯ ಸರ್ಕಾರವು, ಅದನ್ನು ಏಕೆ ರದ್ದು ಮಾಡಬಾರದೆಂಬುದಕ್ಕೆ ಕಾರಣ ತೋರಿಸಲು ರಾಜ್ಯ ಮಂಡಳಿಗೆ ಯುಕ್ತ ಅವಕಾಶವನ್ನು ಕೊಡತಕ್ಕದು ಮತ್ತು ರಾಜ್ಯ ಮಂಡಲಿಯ ವಿವರಣೆಗಳು ಮತ್ತು ಆಕ್ಷೇಪಣೆಗಳು ಯಾವುವಾದರೂ ಇದ್ದರೆ ಅವುಗಳನ್ನು ಪರ್ಯಾಲೋಚಿಸತಕ್ಕದು.

(2) ರಾಜ್ಯ ಮಂಡಲಿಯನ್ನು ರದ್ದುಪಡಿಸಲು (1)ನೇ ಉಪ-ಪ್ರಕರಣದ ಮೇರೆಗೆ ಅಧಿಸೂಚನೆಯು ಪ್ರಕಟವಾದ ಮೇಲೆ,—

(ಕ) ಎಲ್ಲಾ ಸದಸ್ಯರು ರದ್ದಿಯಾತಿಯ ದಿನಾಂಕದಿಂದ ಅವರ ಅಂಥ ಪದಗಳನ್ನು ಖಾಲಿ ಮಾಡತಕ್ಕದು;

(ಖ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ರಾಜ್ಯ ಮಂಡಲಿಯು ಚಲಾಯಿಸಬಹುದಾದ, ನೆರವೇರಿಸಬಹುದಾದ ಅಥವಾ ನಿರ್ವಹಿಸಬಹುದಾದ ಎಲ್ಲಾ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು (3)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಮಂಡಲಿಯನ್ನು ಪುನಾರಚಿಸುವವರೆಗೆ, ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ಚಲಾಯಿಸತಕ್ಕದು, ನೆರವೇರಿಸತಕ್ಕದು ಅಥವಾ ನಿರ್ವಹಿಸತಕ್ಕದು;

(ಗ) ರಾಜ್ಯ ಮಂಡಲಿಯ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಎಲ್ಲಾ ಸ್ವತ್ತು, (3)ನೇ ಉಪ-ಪ್ರಕರಣದ ಮೇರೆಗೆ ಮಂಡಲಿಯನ್ನು ಪುನಾರಚಿಸುವವರೆಗೆ ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದು.

(3) (1) ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ರದ್ದಿಯಾತಿಯ ಅವಧಿಯು ಮುಕ್ತಾಯವಾದ ಮೇಲೆ ರಾಜ್ಯ ಸರ್ಕಾರವು,—

(ಕ) ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾದಂತೆ ಆರು ತಿಂಗಳುಗಳಿಗೆ ಮೀರದ ಇನ್ನೂ ಹೆಚ್ಚಿನ ಅವಧಿಗೆ ರದ್ದಿಯಾತಿಯ ಅವಧಿಯನ್ನು ವಿಸ್ತರಿಸಬಹುದು; ಅಥವಾ

(ಖ) ಸಂದರ್ಭಾನುಸಾರ, ಹೊಸ ನಾಮನಿರ್ದೇಶನ ಅಥವಾ ನೇಮಕಾತಿಯ ಮೂಲಕ ರಾಜ್ಯ ಮಂಡಲಿಯನ್ನು ಪುನಾರಚಿಸಬಹುದು ಮತ್ತು ಅಂಥ ಸಂದರ್ಭದಲ್ಲಿ (2)ನೇ ಉಪ-ಪ್ರಕರಣದ (ಕ) ಖಂಡದ ಮೇರೆಗೆ ಅವನ ಪದವನ್ನು ಖಾಲಿ ಮಾಡಿದ ಯಾವನೇ ವ್ಯಕ್ತಿಯು ಸಹ ನಾಮನಿರ್ದೇಶನ ಅಥವಾ ನೇಮಕಾತಿಗೆ ಅರ್ಹನಾಗಿರತಕ್ಕದು:

ಪರಂತು, ರಾಜ್ಯ ಸರ್ಕಾರವು (1) ನೇ ಉಪ-ಪ್ರಕರಣದ ಮೇರೆಗೆ ಮೂಲತಃ ನಿರ್ದಿಷ್ಟಪಡಿಸಿದ ಅಥವಾ ಈ ಉಪ-ಪ್ರಕರಣದ ಮೇರೆಗೆ ವಿಸ್ತರಿಸಿದ ರದ್ದಿಯಾತಿಯ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಈ ಉಪ-ಪ್ರಕರಣದ (ಕ) ಖಂಡದ ಮೇರೆಗೆ ಕ್ರಮವನ್ನು ಕೈಕೊಳ್ಳಬಹುದು.

**48.** ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ,1974ರ ಮೇರೆಗೆ ರಚಿತವಾದ ಕೇಂದ್ರ ಮಂಡಲಿ ಅಥವಾ ರಾಜ್ಯ ಮಂಡಲಿಗಳ ರದ್ದಿಯಾತಿ ಸಂದರ್ಭದಲ್ಲಿ ವಿಶೇಷ ಉಪಬಂಧ:— ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974ರ ಮೇರೆಗೆ ರಚಿತವಾದ ಕೇಂದ್ರ ಮಂಡಲಿ ಅಥವಾ ಯಾವುದೇ ರಾಜ್ಯ ಮಂಡಲಿಯನ್ನು ಆ ಅಧಿನಿಯಮದ ಮೇರೆಗೆ ಸಂದರ್ಭಾನುಸಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ರದ್ದುಪಡಿಸಿರುವಲ್ಲಿ, ಅಂಥ ರದ್ದಿಯಾತಿಯ ಅವಧಿಯಲ್ಲಿ ಈ ಅಧಿನಿಯಮದ ಮೇರೆಗಿನ ಕೇಂದ್ರ ಮಂಡಲಿ ಅಥವಾ ರಾಜ್ಯ ಮಂಡಲಿಯ ಎಲ್ಲಾ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974ರ (1974ರ 6) ಮೇರೆಗೆ ಕೇಂದ್ರ ಮಂಡಲಿ ಅಥವಾ ಅಂಥ ರಾಜ್ಯ ಮಂಡಲಿಯ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ಅಂಥ ಅವಧಿಯಲ್ಲಿ ಚಲಾಯಿಸುತ್ತಿರುವ, ನೆರವೇರಿಸುತ್ತಿರುವ ಅಥವಾ ನಿರ್ವಹಿಸುತ್ತಿರುವ ವ್ಯಕ್ತಿ, ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು, ನೆರವೇರಿಸತಕ್ಕದ್ದು ಅಥವಾ ನಿರ್ವಹಿಸತಕ್ಕದ್ದು.

**49.** ಈ ಅಧಿನಿಯಮದ ಮೇರೆಗೆ ರಚಿತವಾದ ರಾಜ್ಯ ಮಂಡಲಿಗಳ ವಿಘಟನೆ :— ಯಾವುದೇ ರಾಜ್ಯದಲ್ಲಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 ಜಾರಿಗೆ ಬಂದಾಗ ಮತ್ತು ಆ ಅಧಿನಿಯಮದ ಮೇರೆಗೆ ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ರಾಜ್ಯ ಮಂಡಲಿಯನ್ನು ರಾಜ್ಯ ಸರ್ಕಾರವು ರಚಿಸಿದಾಗ, ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ರಾಜ್ಯ ಮಂಡಲಿಯು ವಿಘಟಿತವಾಗತಕ್ಕದ್ದು ಮತ್ತು ಮೊದಲು ಹೇಳಿದ ಮಂಡಲಿಯು ಆ ರಾಜ್ಯದಲ್ಲಿ, ತರುವಾಯ ಹೇಳಿದ ಮಂಡಲಿಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ರಚಿತವಾದ ರಾಜ್ಯ ಮಂಡಲಿಯು ವಿಘಟಿತವಾದ ಮೇಲೆ,—

(ಕ) ಎಲ್ಲಾ ಸದಸ್ಯರು ಅವರ ಅಂಥ ಪದಗಳನ್ನು ಖಾಲಿ ಮಾಡತಕ್ಕದ್ದು;

(ಖ) ಅಂಥ ವಿಘಟನೆಯ ನಿಕಟಪೂರ್ವದಲ್ಲಿ, ರಾಜ್ಯ ಮಂಡಲಿಯು ಒಡೆತನದಲ್ಲಿದ್ದ ಅಥವಾ ಅದರಲ್ಲಿ ನಿಹಿತವಾಗಿದ್ದ ಎಲ್ಲಾ ಹಣಗಳು ಮತ್ತು ಯಾವುದೇ ಬಗೆಯ ರಾಜ್ಯ ಮಂಡಲಿಯ ನಿಧಿಯನ್ನು ಒಳಗೊಂಡು ಇತರ ಸ್ವತ್ತು, ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿನ ರಾಜ್ಯ ಮಂಡಲಿಗೆ ವರ್ಗಾವಣೆಯಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು;

(ಗ) ಅಂಥ ವಿಸರ್ಜನೆಯ ನಿಕಟಪೂರ್ವದಲ್ಲಿ ರಾಜ್ಯ ಮಂಡಲಿಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರತಿಯೊಬ್ಬ ಅಧಿಕಾರಿ ಮತ್ತು ಇತರ ನಿಯೋಜಿತನು ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿನ ರಾಜ್ಯ ಮಂಡಲಿಗೆ ವರ್ಗಾವಣೆಯಾಗತಕ್ಕದ್ದು ಮತ್ತು ರಾಜ್ಯ ಮಂಡಲಿಯ ಅಧಿಕಾರಿ ಅಥವಾ ಇತರ ನಿಯೋಜಿತನಾಗತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ರಚಿತವಾದ ರಾಜ್ಯಮಂಡಲಿಯು ವಿಘಟನೆಯಾಗಿಲ್ಲದಿದ್ದರೆ ಅವನು ಹೊಂದಿರಬಹುದಾಗಿದ್ದುದೇ ಆದ ಪದವನ್ನು ಅದೇ ಅವಧಿಯವರೆಗೆ ಮತ್ತು ಅದೇ ಪರಿಶ್ರಮ ಧನ ಮತ್ತು ಅವೇ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಧಾರಣ ಮಾಡತಕ್ಕದ್ದು ಮತ್ತು ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿನ ರಾಜ್ಯಮಂಡಲಿಯು ಅಂಥ ಅವಧಿ, ಪರಿಶ್ರಮ ಧನ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ಕ್ರಮಬದ್ಧವಾಗಿ ಬದಲಾಯಿಸುವ ಹೊರತು ಮತ್ತು ಅಲ್ಲಿಯವರೆಗೆ ಹಾಗೆ ಮಾಡುವುದು ಮುಂದುವರಿಯತಕ್ಕದ್ದು:

ಪರಂತು, ಅಂಥ ಯಾವನೇ ಅಧಿಕಾರಿ ಅಥವಾ ಇತರ ನಿಯೋಜಿತನ ಸೇವಾವಧಿ, ಪರಿಶ್ರಮಧನ ಮತ್ತು ನಿಬಂಧನೆಗಳು ಮತ್ತು ಷರತ್ತುಗಳನ್ನು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಅವನಿಗೆ ಅನಾನುಕೂಲವಾಗುವಂತೆ ಬದಲಾಯಿಸತಕ್ಕದ್ದಲ್ಲ.

(ಘ) ಅಂಥ ವಿಘಟನೆಯ ನಿಕಟಪೂರ್ವದಲ್ಲಿ ರಾಜ್ಯ ಮಂಡಲಿಯ ಯಾವುದೇ ಬಗೆಯ ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳನ್ನು, ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿನ ರಾಜ್ಯಮಂಡಲಿಯು, ಸಂದರ್ಭಾನುಸಾರ ಹೊಣೆಗಾರಿಕೆಗಳು ಅಥವಾ ಬಾಧ್ಯತೆಗಳೆಂದು ಭಾವಿಸತಕ್ಕದ್ದು ಮತ್ತು ಅಂಥ ವಿಘಟನೆಯ ನಿಕಟಪೂರ್ವದಲ್ಲಿ ಮತ್ತು ಅಂಥ ಹೊಣೆಗಾರಿಕೆಗೆ ಅಥವಾ ಬಾಧ್ಯತೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗೆ ರಚಿತವಾದ ರಾಜ್ಯ ಮಂಡಲಿಯು ಹೂಡಿದ ಅಥವಾ ಅದರ ವಿರುದ್ಧ ಇತ್ಯರ್ಥದಲ್ಲಿರುವ ಯಾವುದೇ ವ್ಯವಹರಣೆಯನ್ನು ಅಥವಾ ಅಸ್ತಿತ್ವದಲ್ಲಿರುವ ವ್ಯಾಜ್ಯ ಕಾರಣವನ್ನು ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿನ ರಾಜ್ಯಮಂಡಲಿಯು ಅಥವಾ ಅದಕ್ಕೆ ವಿರುದ್ಧವಾಗಿ ಮುಂದುವರಿಸಬಹುದು ಮತ್ತು ಜಾರಿಗೊಳಿಸಬಹುದು.

**50.** ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ:— (1)ಕೇಂದ್ರ ಸರ್ಕಾರವು, ತಾನಾಗಿಯೇ ಅಥವಾ ಮಂಡಲಿಯ ಶಿಫಾರಸಿನ ಮೇಲೆ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ ಉದ್ಯಮವನ್ನು ಅನುಸೂಚಿಗೆ ಸೇರಿಸಬಹುದು ಅಥವಾ ಅದರಿಂದ ಲೋಪಿಸಬಹುದು ಅಥವಾ ಯಾವುದೇ ಉದ್ಯಮದ ವಿವರಣೆಯನ್ನು ಬದಲಾಯಿಸಬಹುದು ಮತ್ತು ಆ ತರುವಾಯ ಅನುಸೂಚಿಯನ್ನು ತದನುಸಾರವಾಗಿ ತಿದ್ದುಪಡಿ ಮಾಡಲಾಗಿದೆಯೆಂಬುದಾಗಿ ಭಾವಿಸತಕ್ಕದ್ದು.

(2) (1)ನೇ ಉಪ-ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**51.** ರಿಜಿಸ್ಟರನ್ನು ಇಡುವುದು:—(1)ಪ್ರತಿಯೊಂದು ರಾಜ್ಯಮಂಡಲಿಯು, ಯಾವ ವ್ಯಕ್ತಿಗಳಿಗೆ 21ನೇ ಪ್ರಕರಣದ ಮೇರೆಗೆ ಸಮ್ಮತಿಯನ್ನು ಕೊಟ್ಟಿದೆಯೋ ಆ ವ್ಯಕ್ತಿಗಳ ವಿವರಗಳು, ಅಂಥ ಪ್ರತಿಯೊಂದು ಸಮ್ಮತಿಗೆ ಸಂಬಂಧಪಟ್ಟಂತೆ ಹೊರಬಿಡುವುದಕ್ಕಾಗಿ ಅದು ವಿಧಿಸಿದ ಮಾನಕಗಳು ಮತ್ತು ನಿಯಮಿಸಬಹುದಾದಂಥ ಇತರ ವಿವರಗಳನ್ನು ಒಳಗೊಂಡ ರಿಜಿಸ್ಟರನ್ನು ಇಡತಕ್ಕದ್ದು.

(2) (1)ನೇ ಉಪ-ಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದ ರಿಜಿಸ್ಟರು, ಅಂಥ ಹೊರಬಿಡುವುದಕ್ಕಾಗಿ ಅಂಥ ಮಾನಕಗಳಲ್ಲಿ ಹಿತಾಸಕ್ತಿಯನ್ನು ಹೊಂದಿದ ಅಥವಾ ಅವುಗಳಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಥವಾ ಈ ಬಗ್ಗೆ ಅಂಥ ವ್ಯಕ್ತಿಯು ಅಧಿಕೃತಗೊಳಿಸಿದ ಯಾವನೇ ಇತರ ವ್ಯಕ್ತಿಯು, ಎಲ್ಲಾ ಯುಕ್ತ ಕಾಲಗಳಲ್ಲಿ ಪರಿಶೀಲಿಸಲು ಮುಕ್ತವಾಗಿರತಕ್ಕದ್ದು.

52. **ಇತರ ಕಾನೂನುಗಳ ಪರಿಣಾಮ:**—ಅಣುಶಕ್ತಿ ಅಧಿನಿಯಮ, 1963ರ (1962ರ 33) ಮೂಲಕ ಅಥವಾ ಮೇರೆಗೆ ಅನ್ಯಥಾ ಉಪಬಂಧಿಸಿದ್ದು ಹೊರತು, ವಿದ್ಯುತ್ ವಿಕಿರಣ ಶಕ್ತಿಯುಳ್ಳ ವಾಯುಮಾಲಿನ್ಯಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉಪಬಂಧಗಳು, ಈ ಅಧಿನಿಯಮವನ್ನು ಹೊರತುಪಡಿಸಿ ಇತರ ಯಾವುದೇ ಅಧಿನಿಯಮಿತಿಯಲ್ಲಿ ಅದಕ್ಕೆ ಅಸಂಗತವಾದುದು ಏನೇ ಅಡಕವಾಗಿದ್ದಾಗ್ಯೂ ಪರಿಣಾಮವನ್ನು ಹೊಂದಿರತಕ್ಕದ್ದು.

53. **ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ** :—ಕೇಂದ್ರ ಸರ್ಕಾರವು ಕೇಂದ್ರ ಮಂಡಲಿಯೊಂದಿಗೆ ಸಮಾಲೋಚಿಸಿ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಬಹುದು, ಎಂದರೆ:—

(ಕ) ಕೇಂದ್ರ ಮಂಡಲಿ ಅಥವಾ ಅದರ ಯಾವುದೇ ಸಮಿತಿಯ ಸಭೆಗಳನ್ನು ನಡೆಸತಕ್ಕಂಥ ಮಧ್ಯಂತರಗಳು ಮತ್ತು ಕಾಲ ಮತ್ತು ಸ್ಥಳ ಮತ್ತು 10ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಮತ್ತು 11ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಅದರಲ್ಲಿ ವ್ಯವಹಾರವನ್ನು ನಡೆಸುವುದಕ್ಕಾಗಿ ಅವಶ್ಯವಾದ ಕೋರಂ ಅನ್ನು ಒಳಗೊಂಡ ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಖ) 11ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಮಂಡಲಿಯ ಸದಸ್ಯರಲ್ಲದ ಕೇಂದ್ರ ಮಂಡಲಿ ಸಮಿತಿಯ ಸದಸ್ಯರಿಗೆ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ಭತ್ಯಗಳು;

(ಗ) ಯಾವ ರೀತಿಯಲ್ಲಿ ಮತ್ತು ಯಾವ ಉದ್ದೇಶಗಳಿಗಾಗಿ, 12ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಮಂಡಲಿಯೊಂದಿಗೆ ವ್ಯಕ್ತಿಗಳನ್ನು ಸಹವರ್ತಿಸಿಕೊಳ್ಳಬಹುದೋ ಆ ರೀತಿ ಮತ್ತು ಆ ಉದ್ದೇಶಗಳು ;

(ಘ) 12ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಮಂಡಲಿಯೊಂದಿಗೆ ಸಹವರ್ತಿಗೊಂಡ ವ್ಯಕ್ತಿಗಳಿಗೆ, 12ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ಭತ್ಯೆಗಳು ;

(ಙ) 16ನೇ ಪ್ರಕರಣದ (2)ನೇ ಉಪ-ಪ್ರಕರಣದ (ಞ) ಖಂಡದ ಮೇರೆಗೆ ಕೇಂದ್ರ ಮಂಡಲಿಯು ನೆರವೇರಿಸಬೇಕಾದ ಪ್ರಕಾರ್ಯಗಳು ;

(ಚ) 34 ಮತ್ತು 35ನೇ ಪ್ರಕರಣಗಳ ಮೇರೆಗೆ ಕೇಂದ್ರ ಮಂಡಲಿಯು ಬಜೆಟ್ ಮತ್ತು ವಾರ್ಷಿಕ ವರದಿಯನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದೊಳಗೆ ತಯಾರಿಸಬಹುದೋ ಮತ್ತು ಕೇಂದ್ರ ಸರ್ಕಾರಕ್ಕೆ ಕಳಿಸಬಹುದೋ ಆ ನಮೂನೆ ಮತ್ತು ಕಾಲ ;

(ಛ) 36ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಮಂಡಲಿಯು ಲೆಕ್ಕ ಪತ್ರಗಳನ್ನು ಇಟ್ಟುಕೊಂಡು ಬರಬಹುದಾದ ನಮೂನೆ.

(2) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳಿಗೆ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ, ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ: ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

54. **ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ:**—(1) ರಾಜ್ಯ ಸರ್ಕಾರವು (3)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, 53ನೇ ಪ್ರಕರಣದ ವ್ಯಾಪ್ತಿಯೊಳಗೆ ಬಾರದೆ ಇರುವ ವಿಷಯಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ:—

(ಕ) ಈ ಅಧಿನಿಯಮದ 7ನೇ ಪ್ರಕರಣದ (7)ನೇ ಉಪ-ಪ್ರಕರಣದ ಮೇರೆಗೆ ರಚಿತವಾದ ರಾಜ್ಯ ಮಂಡಲಿಯ ಅಧ್ಯಕ್ಷ ಮತ್ತು ಇತರ ಸದಸ್ಯರ (ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ) ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.

(ಖ) ರಾಜ್ಯ ಮಂಡಲಿ ಅಥವಾ ಅದರ ಯಾವುದೇ ಸಮಿತಿಯ ಸಭೆಗಳನ್ನು ನಡೆಸತಕ್ಕಂಥ ಮಧ್ಯಂತರಗಳು ಮತ್ತು ಕಾಲ ಮತ್ತು ಸ್ಥಳ ಮತ್ತು 10ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಮತ್ತು 11ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಅದರಲ್ಲಿ ವ್ಯವಹಾರವನ್ನು ನಡೆಸುವುದಕ್ಕಾಗಿ ಅವಶ್ಯವಾದ ಕೋರಂ ಅನ್ನು ಒಳಗೊಂಡು ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಗ) 11ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಮಂಡಲಿ ಸದಸ್ಯರಲ್ಲದ ರಾಜ್ಯ ಮಂಡಲಿ ಸಮಿತಿಯ ಸದಸ್ಯರಿಗೆ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ಭತ್ಯಗಳು;

(ಘ) 12ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಮಂಡಲಿಯೊಂದಿಗೆ ಯಾವ ರೀತಿಯಲ್ಲಿ ಮತ್ತು ಯಾವ ಉದ್ದೇಶಗಳಿಗಾಗಿ ವ್ಯಕ್ತಿಗಳನ್ನು ಸಹವರ್ತಿಸಿಕೊಳ್ಳಬಹುದೋ ಆ ರೀತಿ ಮತ್ತು ಉದ್ದೇಶಗಳು;

(ಙ) 12ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಮಂಡಲಿಯೊಂದಿಗೆ ಸಹವರ್ತಿಸಿಕೊಂಡ ವ್ಯಕ್ತಿಗಳಿಗೆ, 12ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ಭತ್ಯಗಳು ;

(ಚ) 14ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ರಾಜ್ಯ ಮಂಡಲಿಯ ಸದಸ್ಯ ಕಾರ್ಯದರ್ಶಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಛ) 14ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ, ರಾಜ್ಯಮಂಡಲಿಯ ಸದಸ್ಯ ಕಾರ್ಯದರ್ಶಿಯು ಚಲಾಯಿಸಬೇಕಾದ ಮತ್ತು ನಿರ್ವಹಿಸಬೇಕಾದ ಅಧಿಕಾರಗಳು ಮತ್ತು ಕರ್ತವ್ಯಗಳು;

(ಜ) 14ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗಿನ ಅದರ ಪ್ರಕಾರ್ಯಗಳ ಸಮರ್ಥ ನೆರವೇರಿಕೆಗಾಗಿ ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಅಧಿಕಾರಿಗಳು ಮತ್ತು ಇತರ ನಿಯೋಜಿತರನ್ನು ರಾಜ್ಯಮಂಡಲಿಯು, ಯಾವ ಷರತ್ತುಗಳಿಗೆ ಒಳಪಟ್ಟು ನೇಮಕ ಮಾಡಬಹುದೋ ಆ ಷರತ್ತುಗಳು;

(ಝ) 14ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ ರಾಜ್ಯಮಂಡಲಿಯು, ಯಾವ ಷರತ್ತಿಗೆ ಒಳಪಟ್ಟು ಸಮಾಲೋಚಕನನ್ನು ನೇಮಕ ಮಾಡಬಹುದೋ ಆ ಷರತ್ತುಗಳು;

(ಞ) 17ನೇ ಪ್ರಕರಣದ (1)ನೇ ಉಪ-ಪ್ರಕರಣದ (ಝ) ಖಂಡದ ಮೇರೆಗೆ ರಾಜ್ಯಮಂಡಲಿಯು ನೆರವೇರಿಸಬೇಕಾದ ಪ್ರಕಾರ್ಯಗಳು;

(ಟ) 19ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ವಾಯು ಮಾಲಿನ್ಯ ನಿಯಂತ್ರಣ ಪ್ರದೇಶ ಅಥವಾ ಪ್ರದೇಶಗಳೆಂದು, ಯಾವುದೇ ಪ್ರದೇಶ ಅಥವಾ ಪ್ರದೇಶಗಳನ್ನು ಘೋಷಿಸಬಹುದಾದಂಥ ರೀತಿ;

(ಠ) 21ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ರಾಜ್ಯಮಂಡಲಿಯ ಸಮ್ಮತಿಗಾಗಿನ ಅರ್ಜಿಯ ನಮೂನೆ, ಅದಕ್ಕೆ ಸಂದಾಯ ಮಾಡಬೇಕಾದ ಫೀಜುಗಳು, ಅಂಥ ಅರ್ಜಿಯನ್ನು ಮಾಡತಕ್ಕಂಥ ಅವಧಿ ಮತ್ತು ಅದು ಒಳಗೊಳ್ಳಬಹುದಾದಂಥ ವಿವರಗಳು;

(ಡ) 21ನೇ ಪ್ರಕರಣದ ಮೇರೆಗಿನ ವಿಚಾರಣೆಗೆ ಸಂಬಂಧಪಟ್ಟಂತೆ ಅನುಸರಿಸಬೇಕಾದ ಪ್ರಕ್ರಿಯೆ;

(ಢ) 23ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಮಾಹಿತಿಯನ್ನು ಯಾವ ಪ್ರಾಧಿಕಾರಿಗಳು ಅಥವಾ ಏಜೆನ್ಸಿಗಳಿಗೆ ಒದಗಿಸತಕ್ಕದ್ದೋ ಆ ಪ್ರಾಧಿಕಾರಿಗಳು ಅಥವಾ ಏಜೆನ್ಸಿಗಳು;

(ಣ) 26ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ವಾಯು ಅಥವಾ ಹೊರಬಿಟ್ಟಿದ್ದರ ಮಾದರಿಗಳನ್ನು ತೆಗೆದುಕೊಳ್ಳಬಹುದಾದಂಥ ರೀತಿ;

(ತ) 26ನೇ ಪ್ರಕರಣದ (1)ನೇ ಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸಿನ ನಮೂನೆ;

(ಥ) 27ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಮಂಡಲಿ ವಿಶ್ಲೇಷಕನ ವರದಿಯ ನಮೂನೆ

(ದ) 27ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಸರ್ಕಾರದ ವಿಶ್ಲೇಷಕನ ವರದಿಯ ನಮೂನೆ;

(ಧ) ರಾಜ್ಯ ವಾಯು ಪ್ರಯೋಗಾಲಯದ ಪ್ರಕಾರ್ಯಗಳು, ವಿಶ್ಲೇಷಣೆ ಅಥವಾ ಉಪ-ಪರೀಕ್ಷೆಗಳಿಗಾಗಿ ವಾಯು ಅಥವಾ ಹೊರಬಿಟ್ಟಿದ್ದರ ಮಾದರಿಗಳನ್ನು ಸದರಿ ಪ್ರಯೋಗಾಲಯಕ್ಕೆ ಒಪ್ಪಿಸುವ ಬಗ್ಗೆ ಪ್ರಕ್ರಿಯೆ, ಅದರ ಮೇಲೆ ಪ್ರಯೋಗಶಾಲೆಯ ವರದಿಯ ನಮೂನೆ, ಅಂಥ ವರದಿಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜು ಮತ್ತು 28ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಅದರ ಪ್ರಕಾರ್ಯಗಳನ್ನು ನೆರವೇರಿಸಲು ಆ ಪ್ರಯೋಗ ಶಾಲೆಯನ್ನು ಶಕ್ತಗೊಳಿಸಲು ಅವಶ್ಯ ಅಥವಾ ವಿಹಿತವಾಗಬಹುದಾದಂಥ ಇತರ ವಿಷಯಗಳು;

(ನ) 29ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸರ್ಕಾರದ ವಿಶ್ಲೇಷಕನಿಗೆ ಅಗತ್ಯಪಡಿಸಿದ ಅರ್ಹತೆಗಳು;

(ಪ) 29ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ರಾಜ್ಯಮಂಡಲಿ ವಿಶ್ಲೇಷಕನಿಗೆ ಅಗತ್ಯಪಡಿಸಿದ ಅರ್ಹತೆಗಳು;

(ಫ) ಅಪೀಲುಗಳನ್ನು ಹೂಡಬಹುದಾದಂಥ ನಮೂನೆ ಮತ್ತು ರೀತಿ, ಅಂಥ ಅಪೀಲುಗಳಿಗೆ ಸಂಬಂಧಪಟ್ಟಂತೆ ಸಂದಾಯ ಮಾಡಬೇಕಾದ ಫೀಜುಗಳು ಮತ್ತು 31ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಅಪೀಲುಗಳನ್ನು ವಿಲೇ ಮಾಡುವಲ್ಲಿ ಅಪೀಲು ಪ್ರಾಧಿಕಾರವು ಅನುಸರಿಸಬೇಕಾದ ಪ್ರಕ್ರಿಯೆ;

(ಬ) 34 ಮತ್ತು 35ನೇ ಪ್ರಕರಣಗಳ ಮೇರೆಗೆ, ರಾಜ್ಯ ಮಂಡಲಿಯ ಬಜೆಟ್ ಮತ್ತು ವಾರ್ಷಿಕ ವರದಿಗಳನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದೊಳಗೆ ತಯಾರಿಸಬಹುದೋ ಮತ್ತು ರಾಜ್ಯ ಸರ್ಕಾರಕ್ಕೆ ಕಳುಹಿಸಬಹುದೋ ಆ ನಮೂನೆ ಮತ್ತು ಆ ಕಾಲ;

(ಭ) 36ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಮಂಡಲಿಯ ಲೆಕ್ಕ ಪತ್ರಗಳನ್ನು ಇಟ್ಟುಕೊಂಡು ಬರಬಹುದಾದ ನಮೂನೆ;

(ಮ) 51ನೇ ಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದ ರಿಜಿಸ್ಟರು ಒಳಗೊಳ್ಳಬೇಕಾದಂಥ ವಿವರಗಳು;

(ಯ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯಗಳು.

(3) ರಾಜ್ಯಮಂಡಲಿಯನ್ನು ಮೊದಲು ರಚಿಸಿದ ತರುವಾಯ, (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ವಿಷಯಗಳಿಗೆ [ಅದರ (ಕ) ಖಂಡದಲ್ಲಿ ಉಲ್ಲೇಖಿಸಿದವುಗಳ ಹೊರತು] ಸಂಬಂಧಪಟ್ಟಂತೆ ಮಂಡಲಿಯೊಂದಿಗೆ ಸಮಾಲೋಚಿಸದೆ ಯಾವುದೇ ನಿಯಮವನ್ನು ರಚಿಸತಕ್ಕದ್ದಲ್ಲ, ವ್ಯತ್ಯಸ್ತಗೊಳಿಸತಕ್ಕದ್ದಲ್ಲ, ತಿದ್ದುಪಡಿ ಮಾಡತಕ್ಕದ್ದಲ್ಲ ಅಥವಾ ನಿರಸನಗೊಳಿಸತಕ್ಕದ್ದಲ್ಲ.

ಅನುಸೂಚಿ

(21, 22, 24 ಮತ್ತು 50ನೇ ಪ್ರಕರಣಗಳನ್ನು ನೋಡಿ)

1. ಅಸ್ಬೆಸ್ಟಾಸ್ ಮತ್ತು ಅಸ್ಬೆಸ್ಟಾಸ್ ಉತ್ಪನ್ನಗಳ ಉದ್ಯಮಗಳು
2. ಸಿಮೆಂಟ್ ಮತ್ತು ಸಿಮೆಂಟ್ ಉತ್ಪನ್ನಗಳ ಉದ್ಯಮಗಳು
3. ಕುಂಭಕಲೆ ಮತ್ತು ಕುಂಭಕಲೆ ಉತ್ಪನ್ನಗಳ ಉದ್ಯಮಗಳು
4. ರಾಸಾಯನಿಕ ಮತ್ತು ಸಂಬಂಧಪಟ್ಟ ಉದ್ಯಮಗಳು
5. ಕಲ್ಲಿದ್ದಲು ಮತ್ತು ಲಿಗ್ನೈಟ್ ಆಧಾರಿತ ರಾಸಾಯನಿಕ ಉದ್ಯಮಗಳು
6. ಇಂಜಿನಿಯರಿಂಗ್ ಉದ್ಯಮಗಳು
7. ಕಬ್ಬಿಣದ ಲೋಹಗಳ ಉದ್ಯಮಗಳು
8. ರಾಸಾಯನಿಕ ಗೊಬ್ಬರಗಳ ಉದ್ಯಮಗಳು
9. ಫೌಂಡ್ರಿಗಳು
10. ಆಹಾರ ಮತ್ತು ಕೃಷಿ ಉತ್ಪನ್ನಗಳ ಉದ್ಯಮಗಳು
11. ಗಣಿ ಉದ್ಯಮಗಳು
12. ಕಬ್ಬಿಣೇತರ ಲೋಹಗಳ ಉದ್ಯಮಗಳು
13. ಗಣಿಯಿಂದ ಪ್ರಯೋಜನ ಪಡೆಯುವುದು, ಸಣ್ಣ ಗುಂಡುಗಳನ್ನು ಮಾಡುವುದು, ಇತ್ಯಾದಿಗಳೂ ಸೇರಿದಂತೆ ಅದುರುಗಳು/ಖನಿಜಗಳ ಸಂಸ್ಕರಣ ಉದ್ಯಮಗಳು
14. ಶಕ್ತಿ (ಕಲ್ಲಿದ್ದಲು, ಪೆಟ್ರೋಲಿಯಂ ಮತ್ತು ಅದರ ಉತ್ಪನ್ನಗಳು) ವಿದ್ಯುಚ್ಛಕ್ತಿ ಉತ್ಪಾದನಾ ಸ್ಥಾವರಗಳು ಮತ್ತು ಬಾಯ್ಲರ್ ಸ್ಥಾವರಗಳು
15. ಕಾಗದ ಮತ್ತು ತಿರುಳು (ಕಾಗದ ಉತ್ಪನ್ನಗಳೂ ಸೇರಿದಂತೆ) ಉದ್ಯಮಗಳು
16. ಜವಳಿ ಸಂಸ್ಕರಣ ಉದ್ಯಮ (ಸಂಪೂರ್ಣವಾಗಿ ಅಥವಾ ಭಾಗಶಃ ಹತ್ತಿಯಿಂದ ತಯಾರಿಸಿದ್ದು)
17. ಪೆಟ್ರೋಲಿಯಂ ಸಂಸ್ಕರಣ ಕೇಂದ್ರಗಳು
18. ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಪೆಟ್ರೋ—ಕೆಮಿಕಲ್ ಉದ್ಯಮಗಳು
19. ನಿರುಪಯುಕ್ತ ವಸ್ತುಗಳನ್ನು ಪಡೆಯುವ ಮತ್ತು ಅದನ್ನು ವಿಲೆ ಮಾಡುವ ಸ್ಥಾವರಗಳು
20. ದಾಹಕಗಳು. (ಇನ್ಸಿನಿರೇಟರ್ಸ್)

* * * *

ಮೇಲ್ಕಂಡ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (1981ರ 14)ರ ಕನ್ನಡ ಭಾಷಾಂತರವನ್ನು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಕ) ಖಂಡದ ಮೇರೆಗೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲು ರಾಷ್ಟ್ರಪತಿಯವರು ಅಧಿಕೃತಗೊಳಿಸಿದ್ದಾರೆ.

ನವದೆಹಲಿ ಕಾರ್ಯದರ್ಶಿ,

ದಿನಾಂಕ: ಭಾರತ ಸರ್ಕಾರ.

The above translation in Kannada of The Air (Prevention And Control of Pollution) Act, 1981 (14 of 1981) has been authorised by the President to be published in the Official Gazette under clause (a) of Section 2 of the Authoritative Texts (Central Laws) Act, 1973.

New Delhi

Date:

V. S. RAMADEVI,

Secretary to the Govt. of India.